ಅವ್ವೆಂಬಳ್ಳ ಶಂಕರನಾರಾಯಣ ನಾವಡ

16-2-74

ಸ್ವರಾಜ್ಯಗೀತಾಮೃತ

ಹರಾಮರ್ಶಿಣಿ

ಜೈ ಹಿಂದ್



ವಂದೇ ಮಾತರಂ

ಗ್ರಂಥಕರ್ತ:
ಜೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು,
ಕಾಸರಗೋಡು. ದ. ಕ.

ಶ್ರೀ. ಪುಣಿಂಚತ್ತಾಯರ

“ಲೀಲೆ”

★

ಕರ್ಣಾಟಕವೈಭವ (ವಿಜಾಪುರ) :—

“**ಲೀಲೆ** — ಇದೊಂದು ಶ್ರೀ. ಪುಣಿಂಚತ್ತಾಯರ ಸ್ವತಂತ್ರವಾದ ಚಿಕ್ಕ ಭಕ್ತಿ ಗೀತೆ. ಭಕ್ತಿಯಿಂದ ನಲಿದಾಡುವ **ಕನಕ ಪುರಂದರರ ಭಕ್ತಿರಸದಿಂದ ನರ್ತಿಸುವ ರಸವಂತಿಯು ಶ್ರೀ. ಲಕ್ಷ್ಮೀನಾರಾಯಣರಲ್ಲಿ ಪುನರುಜ್ಜೀವನವನ್ನು ಹೊಂದಿತೆಂದು ಈ ಕವಿತೆಯನ್ನು ಓದುವವರಿಗೆ ಭಾಸವಾಗುತ್ತದೆ.** ಆಧುನಿಕ ಕವಿತೆಗಳಲ್ಲಿ ಇಂಥ ಲಲಿತವಾದ ಪದಸರಣಿಯೂ, ಮನೋರಮವಾದ ಸರಲತೆಯೂ, ಭಕ್ತಿಮಯ ಗಾಂಭೀರ್ಯವೂ, ಹೊರಹೊಮ್ಮುವ ಸ್ಫೂರ್ತಿಯೂ ಸಿಕ್ಕುವದು ದುಸ್ತರವೆಂದು ನಮಗೆ ತೋರುತ್ತದೆ. ತೋರಿಕೆಯಲ್ಲಿ ವಿಷಮವೂ ವಿಚಿತ್ರವೂ ಆದ ಭಗವಂತನ ಲೀಲೆಯು ಎಷ್ಟು ಅಗಾಧವಾಗಿದೆಂಬದು ಕವಿಗಳು ಬಲು ಮನೋಬೋಧಕವಾಗಿ ಹಾಡಿದ್ದಾರೆ. ಕವಿತೆಯನ್ನು ಓದೋದುತ್ತ ರಸಿಕನು ಮನಸೋತು ಮೈಮರೆತು ಆನಂದಾಶ್ರುಗಳನ್ನು ಸುರಿಸದೆ ಇರಲಾರನೆಂದು ನಾವು ಎದೆತಟ್ಟಿ ಹೇಳುತ್ತೇವೆ. ಇಂಥ **ಕಾವ್ಯಶಾರದೆಯ** ‘**ಲೀಲೆ**’ಯನ್ನು ಮುದ್ದಾಡಿ ಯಾವ ಕನ್ನಡಿಗನು ನಲಿದಾಡುವದಿಲ್ಲವೋ ಅವನ ದುರ್ಭಾಗ್ಯಕ್ಕೆಣೆಯಿಲ್ಲ.”

ಸ್ವರಾಜ್ಯಗೀತಾಮೃತ



ಧೀರ ಭಗೀರಥ 'ಗಾಂಧಿ' ಸಾಧಿಸುತ ।
'ಸ್ವಾರಾಜ್ಯ' ಗಂಗೆಯನಿಳಿಸಲ್ಕೈತರುತ ॥
ಭೂರಿಪ್ರವಾಹಕೆ ತಲೆಯನೊಡ್ಡಿರುವ ।
ಶೂರ 'ಜವಾಹರ'ನಿಗೆ ಜಯ ದೇವ ॥

ಗ್ರಂಥಕರ್ತ:

ಶ್ರೀ. ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು,

ಕಾಸರಗೋಡು, (ದ. ಕ.)

೦–೧೨–೦

Printed at the Sharada Press, Mangalore,
P. I. C. S. K. 22—December 1947

ಸಮರ್ಪಣೆ



ಶ್ರೀ ಪುಂಡೂರು ರಾಮಚಂದ್ರ ಪುಣಿಂಚತ್ತಾಯರು

ಜನನ: ೧೮೭೩]   [ನಿಧನ: ೧೨-೩-೧೯೩೦

ನನ್ನ


ಪರಮಪೂಜ್ಯ ತೀರ್ಥರೂಪರವರ

ದಿವ್ಯಸನ್ನಿಧಿಗೆ

ಗ್ರಂಥಕರ್ತ

೮-೧೨-೧೯೪೭

P. L. Puninchattaya.



ಶ್ರೀ. ಪುಂಡೂರು
ಲಕ್ಷ್ಮೀನಾರಾಯಣ ಪುಣಿಂಚತ್ತಾಯರು

ಶ್ರೀ. ಓಲೆಸರಿ
ಶಂಕರನಾರಾಯಣ ಕಡಂಬಳಿತ್ತಾಯ

ಪ್ರಸ್ತಾವನೆ

ಲೋಕಮಾನ್ಯ ತಿಲಕರ ನಿಯೋಗಾನಂತರ **ಮಹಾತ್ಮಾ ಗಾಂಧಿ**ಯವರು ಮೊದಲಾಗಿ ಮಂಗಳೂರಿಗೆ ದಯಮಾಡಿಸಿದರು. ೧೯೨೦ನೇ ಇಸವಿಯ ಆ ಸಮಯದಲ್ಲಿ ಮಂಗಳೂರು ಗವರ್ನಮೆಂಟ್ ಕಾಲೇಜಿನಲ್ಲಿ ಇಂಟರ್‌ಮೀಡಿಯೇಟ್ ತರಗತಿಯಲ್ಲಿರುತ್ತಿದ್ದ ನಾನು '**ಬಾಲಗಂಗಾಧರಸ್ತವ**' ಎಂಬ ನನ್ನ ಚಿಕ್ಕ ಪುಸ್ತಕವನ್ನು ಮಹಾತ್ಮರಿಗೆ ಅರ್ಪಿಸಿದೆನು. ಅದನ್ನು ಪಡೆದುಕೊಂಡ ಮಹಾತ್ಮರು, ವಿಷಯವನ್ನು ನನ್ನೊಡನೆ ಕೇಳಿ ತಿಳಿದು, ಸಂತೋಷವನ್ನು ವ್ಯಕ್ತಪಡಿಸಿದರು. ಅನಂತರ ಕೆಲವು ಮಾತುಗಳಾದ ಮೇಲೆ 'ಕನ್ನಡದಲ್ಲಿಯೂ ರಾಷ್ಟ್ರಗೀತೆಗಳನ್ನು ಬರೆದು ತನ್ಮೂಲಕ ಜನಜಾಗ್ರತಿಗೊಳಿಸಬೇಕು, ಹಾಗಾದರೆ ಭಾಷಾಸೇವೆಯೊಡನೆ ದೇಶಸೇವೆ ಮಾಡಿದಂತಾಯಿತು—ಹಾಗೆ ಮಾಡು' ಎಂದು ಆಜ್ಞಾಪಿಸಿದರು. ಅದಕ್ಕೆ ತಮ್ಮ ಆಶೀರ್ವಾದವಿರಲಿ ಎಂದು ನಾನು ನಮಸ್ಕರಿಸಿದೊಡನೆ, ಎರಡೂ ಕೈಗಳನ್ನು ನನ್ನ ತಲೆಯ ಮೇಲಿಟ್ಟು "May God bless you" ಎಂದು ಹರಸಿದರು. ಆಗ ಆ ಮಹಾತ್ಮರ ಪ್ರಥಮ ದರ್ಶನ ಸ್ಪರ್ಶನಮಾತ್ರದಿಂದಲೇ ಉಂಟಾದ ಸ್ಫೂರ್ತಿಯೇ ಅಂದಿನಿಂದ ಈ ಇಪ್ಪತ್ತೇಳು ವರ್ಷಗಳಲ್ಲಾದ ನಮ್ಮ ಭಾರತ ಸ್ವಾತಂತ್ರ್ಯಸಮರದ ಪ್ರತಿಯೊಂದು ಸಂದರ್ಭದಲ್ಲಿಯೂ ಜನಜಾಗ್ರತಿಗೊಳಿಸಲನುಕೂಲವಾದ ಕೃತಿಗಳನ್ನು ರಚಿಸಲು ಕಾರಣವಾಯಿತು. ಆ ಅಪೂರ್ವ ಸ್ಮರಣೆಯನ್ನು ತಿಳಿಸುವುದಕ್ಕೆ ಅತ್ಯಾನಂದವಾಗುತ್ತದೆ.

ದಿವಂಗತ **ದೇಶಭಕ್ತ ಕಾರ್ನಾಡು ಸದಾಶಿವರಾಯ**ರ ಅನುಗ್ರಹದಿಂದ ನನಗೆ ಅಂದು ಮಹಾತ್ಮರ ಆಶೀರ್ವಾದವು ದೊರಕಿತು. ಶ್ರೀ. ಸದಾಶಿವರಾಯರು ಆ ವಿಷಯವನ್ನು ನನಗೆ ಆಗಾಗ ನೆನಪು ಹುಟ್ಟಿಸುತ್ತ ಮಹಾತ್ಮರ ಆಜ್ಞೆಯಂತೆ ರಾಷ್ಟ್ರೀಯ ಕವಿತೆಗಳನ್ನು ಬರೆಯಲು ಸರಲಹೃದಯದ ತನ್ನ ಸುಮಧುರ ವಾಣಿಯಿಂದ ಹುರಿದುಂಬಿಸುತ್ತಿದ್ದರು. ತಮ್ಮ ಸ್ವಂತ ಅಭಿಪ್ರಾಯಗಳನ್ನು ಬರೆದುಕೊಟ್ಟದ್ದಲ್ಲದೆ, **ದೇಶಭಕ್ತ ಗಂಗಾಧರರಾವ್ ದೇಶಪಾಂಡೆ**ಯವರಿಂದಲೂ ಮುನ್ನುಡಿಯನ್ನು ಬರೆಯಿಸಿ ಉತ್ತೇಜನ ಕೊಟ್ಟುದರ ಫಲವಾಗಿ ಬೆಳಗಾಂವಿನ ರಾಷ್ಟ್ರೀಯ ಮಹಾಸಭೆಯ ಸಮಯಕ್ಕೆ ನನ್ನ '**ರಾಷ್ಟ್ರಗೀತಾ ರತ್ನಾಕರ**'ವು ಪ್ರಕಾಶವಾಯಿತು.

ಅನಂತರ — ಎಂದರೆ ೧೯೨೫ನೆ ಇಸವಿಯಿಂದ ೧೯೪೭ರ ವರೆಗೂ ಸ್ವಾತಂತ್ರ್ಯ ಸಂಗ್ರಾಮವು ಭರದಿಂದ ಸಾಗುತ್ತ ಬಂತು. ಸ್ವಾತಂತ್ರ್ಯ ಸುಧೆ ಹಾಗೂ ಸ್ವರಾಜ್ಯಾಮೃತ ಸಿದ್ಧಿಗಾಗಿ ಪರಬಲ ಸಮುದ್ರಮಥನವೇ ಆಯಿತೆಂದರೂ ಅತಿಶಯವಾಗಲಾರದು. ಆ ಸಮುದ್ರಮಥನ ಕಾಲದಲ್ಲಿ ಸಾವಿರಾರು ಭಾರತ ವೀರವೀರೆಯರು ಸಹಿಸಲಾರದ ಸಂಕಟಕ್ಕೀಡಾದರು! ತಮ್ಮ ಸರ್ವಸ್ವವನ್ನೂ ಕಳೆದುಕೊಂಡರು! ಪ್ರಾಣವನ್ನೇ ಅರ್ಪಿಸಿದರು! ಸೆರೆಮನೆಯಿಂದ ಹೊರಗೆ ಬರುವಾಗ ಕೇವಲ ಅಸ್ಥಿಪಂಜರಪ್ರಾಯರಾಗಿ ಬಂದ ಭರತಖಂಡದ ಎಷ್ಟೋ ಪ್ರಚಂಡ ಮುಖಂಡರು ಅಕಾಲ ಮರಣಕ್ಕೀಡಾದರು! ಸಾಗರಮಥನ ಕಾಲದಲ್ಲಿ ಕಾಳಕೂಟಾದಿಗಳುದಿಸಿ ಲೋಕವನ್ನೇ ಸಂತಾಪಗೊಳಿಸಿದಂತೆ ಈ ಸ್ವರಾಜ್ಯಾಮೃತ ಸಿದ್ಧಿಯ ಸಾಧನೆಯಲ್ಲಿಯೂ ಅನೇಕ ತರದ ಸಂಕಷ್ಟದ ಸಂತಪ್ತ ಜ್ವಾಲೆಗಳು ಪ್ರಜ್ವಲಿಸಿ ಬಂದವು. ಆದರೇನು?

ಯಾರಿಗೋಸ್ಕರ ಗಾಂಧಿ ಬಂಧನದೊಳಿಹನು? ॥ ಪ. ॥
ಭಾರತೀಯರೆ ಯೋಚಿಸಿರಿ ಮನದೊಳಿದನು ॥
೦ ೦ ೦ ೦ ೦
ಹಿಂದೂ, ಮುಸಲ್ಮಾನ, ಪಾರ್ಶಿ, ಕ್ರೈಸ್ತರ ಬಂಧು ।
"ಹಿಂದೀ ಸ್ವರಾಜ್ಯ' ಸಂಸ್ಥಾಪನೆಯ ಗೈವಾ ॥
ಹಿಂದೀ ಸ್ವರಾಜ್ಯ ಸಂಸ್ಥಾಪನಾಚಾರ್ಯ ಶ್ರೀ ।
ಗಾಂಧಿ"ಯೆಂಬಭಿಧಾನದಿಂದ ರಾಜಿಸುವ ॥

ಎಂಬುದಾಗಿ–ಕಾಲು ಶತಮಾನದ ಹಿಂದೆ ಎಂದರೆ–ತಾ. ೧೦–೩–೧೯೨೨ರಲ್ಲಿ ಗಾಂಧಿಜಿಯವರನ್ನು ಬಂಧನದಲ್ಲಿರಿಸಿದಾಗ ಭಾವೋದ್ವೇಗದಿಂದ ನಾನು ಬರೆದ ಆ ಭವಿಷ್ಯವಾಣಿಯನ್ನು ೧೯೨೪ನೇ ಇಸವಿಯಲ್ಲಿ ಪ್ರಕಟಿಸಿದ ನನ್ನ "ರಾಷ್ಟ್ರಗೀತಾರತ್ನಾಕರ" ದಲ್ಲಿಯೂ ಪ್ರಕಟಗೊಳಿಸಿರುವಂತೆ ಇಂದು ಪ್ರತ್ಯಕ್ಷಾನುಭವದಿಂದ ನಿಜವಾಗಿ ಬೆಳಗುತ್ತಿರುವ **"ಹಿಂದೀ ಸ್ವರಾಜ್ಯ ಸಂಸ್ಥಾಪನಾಚಾರ್ಯ ಶ್ರೀಗಾಂಧಿ**"ಯವರ ಆತ್ಮಬಲ ಪ್ರಭಾವದಿಂದಾಗಿ ಕೊನೆಗಂತೂ ತಾ: ೧೫–೮–'೪೭ರಲ್ಲಿ ಸ್ವಾತಂತ್ರ್ಯೋತ್ಸವವಾಯಿತು! ಸ್ವರಾಜ್ಯಾಮೃತ ಸಿದ್ಧಿಯ ಪ್ರದರ್ಶನವಾಯಿತು! ಆ ವರೆಗೆ ರಾಷ್ಟ್ರಸಭೆಯಲ್ಲಾದ ಮಹತ್ವದ ಪ್ರತಿಯೊಂದು ಘಟನೆಯ ವೃತ್ತಾಂತವನ್ನೂ ಜನತೆಗೆ ತಿಳಿಸಲು ಸುಲಭವಾಗುವಂತೆ ಅನೇಕ ಹಾಡುಗಳಲ್ಲಿ ರಚಿಸಿದೆನು. ಪುರಂದರ, ಕನಕಾದಿಗಳ ಹಾಡಿನ ಧಾಟಿಗಳಲ್ಲಿ ರಚಿಸಿದ ಹಲವು ಕೃತಿಗಳನ್ನು ಕರ್ಣಾಟಕದ ಪತ್ರಿಕೆಗಳೆಲ್ಲವೂ ಅತ್ಯಾದರದಿಂದ ಪ್ರಕಟಿಸಿ ಈ ಗ್ರಂಥಕರ್ತನ–ಕೃತಜ್ಞತೆಗೆ ಪಾತ್ರವಾದವು.

ಈ ರೀತಿಯಲ್ಲಿ ಬರೆದ ಗೀತೆಗಳಲ್ಲಿ ಇಂದಿಗೆ ದೊರಕಿದ ಕೆಲವನ್ನು ಮಾತ್ರ ಈ **'ಸ್ವರಾಜ್ಯಗೀತಾಮೃತ**'ದಲ್ಲಿ ಸೇರಿಸಲಿಕ್ಕೆ ಸಾಧ್ಯವಾಯಿತು. ಈ ಸಂಗ್ರಹ ಕಾರ್ಯದಲ್ಲಿ ಹೆಚ್ಚಿನ ಉತ್ಸಾಹದಿಂದ ಸಹಕರಿಸಿ ಉಲ್ಲಾಸಗೊಳಿಸಿದ ನನ್ನ ಪ್ರಿಯಬಂಧು **ಶ್ರೀಮಾನ್ ಓಲೆಸರಿ ಶಂಕರನಾರಾಯಣ ಕಡಂಬಳಿತ್ತಾಯರ** ಸ್ವದೇಶಾಭಿಮಾನವನ್ನು ನಾನು ಸ್ಮರಿಸದೆ ಇರಲಾರೆನು.

ಅಲ್ಲದೆ ಮನೋಹರವಾದ "ಮುನ್ನುಡಿ"ಯ ನಾಂದಿಮಂತ್ರಘೋಷದಿಂದ ಈ "ಸ್ವರಾಜ್ಯಗೀತಾಮೃತ"ವನ್ನು ಪವಿತ್ರಗೊಳಿಸಿದ ಇಂದಿನ ಕರ್ಣಾಟಕ ದೇವಿಯ ಪ್ರಧಾನ ಪುರೋಹಿತರಂತಿರುವ ಕನ್ನಡ ಭಕ್ತರ ಹಿತಚಿಂತಕರಾದ **ಶ್ರೀಮಾನ್ ಮಂಜೇಶ್ವರ ಗೋವಿಂದಪೈ**ಗಳವರಿಗೆ ನಾನು ತುಂಬ ಆಭಾರಿಯಾಗಿದ್ದೇನೆ.

ಕಾಸರಗೋಡಿನಲ್ಲಾಗುವ **ಸಾಹಿತ್ಯ ಪರಿಷತ್ತಿನ ೩೧ನೇ ಅಧಿವೇಶನದ** ಕಾಲಕ್ಕೆ ಸರಿಯಾಗಿ ಈ 'ಗೀತಾಮೃತ'ವನ್ನು ಅಂದವಾಗಿ ಸಿದ್ಧಗೊಳಿಸಿಕೊಟ್ಟ ಮಂಗಳೂರಿನ **ಶಾರದಾ ಛಾಪಖಾನೆ**ಯವರಿಗೂ ನನ್ನ ಹೃತ್ಪೂರ್ವಕ ವಂದನೆಗಳು.

೨೮–೧೨–೧೯೪೭
ಮುದ್ದಣ ನಗರ
ಕಾಸರಗೋಡು.

ಪುಂಡೂರು
ಲಕ್ಷ್ಮೀನಾರಾಯಣ ಪುಣಿಂಚತ್ತಾಯ,
ಸ್ವಾಗತಾಧ್ಯಕ್ಷ, ಸಾಹಿತ್ಯ ಗೋಷ್ಠಿ.

ಮುನ್ನುಡಿ

ಅಸಾಮಾನ್ಯವಾದ ಪ್ರಾಕೃತಿಕ ಹಾಗೂ ಸಾಂಸಾರಿಕ ಘಟನೆಗಳು ಮನುಷ್ಯನದೇ ಅಲ್ಲ, ಪ್ರತ್ಯೇಕ ಜೀವಿಯ ಹೃದಯವನ್ನೂ ಕದಲಾಡಿಸುತ್ತವಾದರೆ, ಅಸಾಧಾರಣವಾದ ರಾಷ್ಟ್ರೀಯ ಹಾಗೂ ಸಾಮಾಜಿಕ ಘಟನೆಗಳು ಮಾನವ ಹೃದಯವನ್ನು ತುಳುಕಾಡಿಸುವುದೇ ಅಲ್ಲ, ಆಯಾ ವ್ಯಕ್ತಿಯ ಶಕ್ತಿಗೆ ಅನುರೂಪವಾಗಿ ಆ ಹೃದಯಗಳಿಂದ ನಾನಾ ವಿಧವೂ ವಿವಿಧ ಕರ್ಣಾಂತವೂ ಆದ ಪ್ರತಿಧ್ವನಿಗಳನ್ನೂ ಎಬ್ಬಿಸುತ್ತವೆ ಎಂಬುದು ಕೇವಲ ಸ್ವಭಾವಸಿದ್ಧ. ಹಾಗಿರುವಲ್ಲಿ ಪರಕೀಯರಿಂದ ಆಳಲ್ಪಡುವ ನಾಡಿನ ಜನತೆ ಅವರ ದಬ್ಬಾಳಿಕೆಯನ್ನು ಪ್ರತಿಭಟಿಸಿ ತಮ್ಮ ಉಚ್ಛೃಂಖಲತೆಯನ್ನು ಸಾಧಿಸುವ ಸಲುವಾಗಿ ಹೂಡಿದ ಹೋರಾಟವೂ, ಉತ್ಸಾಹಭರಿತರಾಗಿ ಅದರಲ್ಲಿ ಅಹಮಹಮಿಕೆಯಿಂದ ಕಾದಾಡಿದ ವೀರರ ಆತ್ಮಯಜ್ಞವೂ, ಮಿಕ್ಕ ಘಟನೆಗಳನ್ನು ಎಷ್ಟಕ್ಕೂ ಮೀರಿದ ಅಪೂರ್ವವೂ ಅಪ್ರತಿರೂಪವೂ ಆದ ಆ ಘಟನೆ—ಅದನ್ನು ಉತ್ಪಾತವೂ ಎನ್ನಬಹುದು—ಆ ನಾಡಿನಲ್ಲಿಯ ಕವಿತಾಶಕ್ತಿಯುಳ್ಳ ದೇಶಭಕ್ತರ ಒಳಗಣ್ಣನ್ನು ತೆರಸಲೂ ಬೇಕು, ಅವರ ನಾಲಗೆಗೆ ಬಜೆಬೆಣ್ಣೆಯನ್ನು ಒರಸಲೂ ಬೇಕು. ಆದರೆ ಹಿಟ್ಟಿನಷ್ಟು ಉಪ್ಪು ಸರ್ವಥಾ ಸಲ್ಲದೆಂಬಂತೆ, ಅಲ್ಲಿಯ ಕವಿಗಳೆಲ್ಲರೂ ಆ ಯುದ್ಧದಲ್ಲಿ ಮನಸಾಪಿ ಸರಿಪಾಲುಗಾರರಾಗಿ, ಅದರ ಸೇನಾನಿಗಳನ್ನೂ ಚೂಣಿಯ ಭಟರನ್ನೂ ಕುರಿತು ಆ ಸಂಗ್ರಾಮಪರವಾದ ಕವಿತೆಗಳನ್ನು ರಚಿಸಲೇ ಬೇಕೆಂದು ಇಲ್ಲವಾದರೂ, ಭಾರತ ಭೂಮಿಯ ಇತರ ದೇಶಗಳ ಕಥೆ ಹೇಗೂ ಇರಲಿ, ನಮ್ಮ ಕನ್ನಡ ನಾಡಿನಲ್ಲಾದರೊ, ನಾನು ಬಲ್ಲಷ್ಟರ ಮಟ್ಟಿಗೆ, ಹಿಟ್ಟಿಗೆ ಉಪ್ಪು ತೀರ ಸಾಲದೇ ಹೋಯಿತು. ನಮ್ಮ ಸ್ವಾತಂತ್ರ್ಯ ಸಂಗರವನ್ನು ಉದ್ಘೋಷಿಸಿದ, ಕಾದಾಳುಗಳನ್ನು ಉಘೇ ಎಂದು ಅದಕ್ಕೆ ಉತ್ತೇಜಿಸಿದ, ಅಥವಾ ಅದರ ಮುಂದಾಳುಗಳ ಸಾವು ನೋವುಗಳನ್ನು ಅನುಶೋಚಿಸಿದ ಕವಿಗಳು ತೀರ ವಿರಳ. ಆ ವಿರಳರಲ್ಲಿ ಶ್ರೀ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು ಒಬ್ಬರು, ಹಾಗೂ ಮೊದಲಿನ ಓಳಿಯವರೊಬ್ಬರು.

ಗಂಡು ಮಗುವನ್ನು ಹಡೆವ ಬಸಿರ ಬೇನೆ ಉದ್ದವಂತೆ, ನೋವೂ ಹೆಚ್ಚಂತೆ. ಹಾಗೆ ಕಳೆದ ೬೦ಕ್ಕೂ ಮಿಕ್ಕ ಸಂವತ್ಸರಗಳಿಂದ ಸಾಗುತ್ತಿದ್ದ ನಮ್ಮ ಮಾತೃಭೂಮಿಯ ಸ್ವಾತಂತ್ರ್ಯ ಸಂಗ್ರಾಮದ ಮಹಾ ಪ್ರಸವವೇದನೆಯಲ್ಲಿ ಮಹಾತ್ಮಾ ಗಾಂಧೀಜಿಯವರು ಸೂಲಗಿತ್ತಿತನವನ್ನು ಹೊತ್ತುಕೊಂಡ ಈ ೨೭ ವರ್ಷಗಳಿಂದ ನೋವಿನ ಮೇಲೆ ನೋವು ಬಳತೊಡಗಿ, ಇತ್ತೀಚೆಗೆ ಕೊನೆಗೆ ಮಗು ಹೊರಬಿದ್ದುದಷ್ಟೆ. ಆ ಉತ್ಕಟವಾದ ಬೇಗುದಿಯ ಕಾಲದಲ್ಲಿ ಶ್ರೀ ಪುಣಿಂಚತ್ತಾಯರು ರಚಿಸಿದ ಹೆಚ್ಚಿನ ಕವನಗಳು ಈ ಸಂಗ್ರಹದಲ್ಲಿವೆ. ಇನ್ನು ೫೦ ವರ್ಷಗಳ ಮೇಲಾದರೂ ಆವಂದಿನವರು ಈವಂದು ಆಗಿಹೋದ ಯೋಧರನ್ನೂ ಅವರ ಹೆಣಗಾಟವನ್ನೂ ಪ್ರತೀಕ್ಷಿಸುವರಾದರೆ ಈ ಕವಿತೆಗಳು ಅವರಿಗೆ ತಿಳಿಯಾದ ಕನ್ನಡಿಯಂತಿವೆ.

ಇವುಗಳಲ್ಲಿ ಒಂದೊಂದೇನೋ ಕುಂದು ಇರಲೂ ಬಹುದು, ಇಲ್ಲದಿರಲೂ ಬಹುದು. ಯಾವುದರಲ್ಲಿ ಇಲ್ಲ? ಯಾರಲ್ಲಿ ಇಲ್ಲ? ಎಷ್ಟೆಂದರೂ ಮನುಷ್ಯನು

ಸರ್ವಥಾ ಅಪೂರ್ಣ, ಅತಏವ ಆತನ ಕೃತಿಯೂ ಅಪೂರ್ಣ. ಅಥವಾ ಮನುಷ್ಯನೇಕೆ? ಸೃಷ್ಟಿಯೇ ಅಪರ್ಯಾಪ್ತ, ಪ್ರಕೃತಿಯೇ ವಿಕಲ. ಆದರೆ ಅಂಥಾ ಕೊರತೆಗಳನ್ನು ಸುಟ್ಟಿ ತೋರಿಸುವುದು ಮುನ್ನುಡಿಗಾರನ ಕೆಲಸವಲ್ಲ, ಸರ್ವಥಾ ಅಲ್ಲ. ಅದಕ್ಕೆ ಸಹಸ್ರಾಕ್ಷನಾದ ವಿಮರ್ಶಕನಿದ್ದಾನೆ. ಭಾಪು ಭಾಪು! ಎಂದು ತನ್ನ ಲೇಖಕನ ಬೆನ್ನು ಚಪ್ಪರಿಸುವುದೂ, ಜಾಗು ಜಾಗು! ಎಂದು ಆತನನ್ನು ಹುರಿದುಂಬಿಸುವುದೂ ಇದಷ್ಟೇ ಮುನ್ನುಡಿಗಾರನ ಕೆಲಸ. ಮುನ್ನುಡಿಗಾರನು ಪುರೋಹಿತನಂತೆ ತನ್ನ ಬಳಿಗೆ ಬಂದಾತನ ಪೌರೋಹಿತ್ಯವನ್ನು ನಡಿಸಿ ಆತನಿಗೆ ಶ್ರೇಯಸ್ಸನ್ನು ಕೋರಿ ಆಶೀರ್ವಚಿಸಬೇಕು, ಆತನ ಊಣೆಯುಗಳ ಕಡೆಗೆ ನೋಡಬಾರದು. ವಿಮರ್ಶಕನಾದರೊ ತನ್ನ ಬಳಿಗೆ ಬಂದಾತನಿಗೆ ಚಿಕಿತ್ಸೆಯನ್ನು ನಡಿಸಿ, ನಿರೋಗಿಯಾದವನ ಆರೋಗ್ಯವನ್ನು ಕೊಂಡಾಡಬೇಕು, ಸಿಗುಳಬೇಕಾದಲ್ಲಿ ಸಿಗುಳಲೂ ಬೇಕು, ಆತನನ್ನು ನೋಯಿಸುವಷ್ಟು ನಿರ್ದಯೆಯಿಂದಲ್ಲ, ಆತನು ಮುಂದೆ ಆರೋಗ್ಯಶಾಲಿಯಾಗಬೇಕೆಂಬ ಮಮತೆಯಿಂದ. ಹೀಗೆ ಮುನ್ನುಡಿಗಾರನ ಹಾಗೂ ವಿಮರ್ಶಕನ ಕೆಲಸಗಳಲ್ಲಿ ಇರುವ ಧ್ರುವಗಳಷ್ಟರ ವ್ಯತ್ಯಾಸವನ್ನು ನಮ್ಮಲ್ಲಿ ಹಲವರು ಇನ್ನೂ ಅರಿತಿಲ್ಲ. ಆ ಕಾರಣವೇ ಈ ಸಂದರ್ಭದ ನೆರವಾಂತು ಅದನ್ನೊಮ್ಮೆ ಸ್ಪಷ್ಟೀಕರಿಸಿ ಬಿಡೋಣ ಎಂದು ಇದೊಂದು ಮಾತನ್ನು ಇಲ್ಲಿ ಪ್ರಾಸಂಗಿಕವಾಗಿ ಹೇಳಿರುವೆನಲ್ಲದೆ, ಈ ಮಾತಿಗೂ ಪ್ರಕೃತ ವಿಷಯಕ್ಕೂ ಬೇರೆ ಸಂಬಂಧವೇನೂ ಇಲ್ಲ.

ಈ ಕವಿತೆಗಳೆಲ್ಲವೂ ಸೊಗಸಾಗಿವೆ. ಇವಲ್ಲಿ ಹುರುಳೂ ಇದೆ, ತಿರುಳೂ ಇದೆ. ಸಿಹಿಯಾದ ನೀರೂ ಸವಿಯಾದ ಬಾವೆಯೂ ಉಳ್ಳ ಸೀಯಾಳದಂತಿವೆ. ಓದಲಿಕ್ಕೆ ರಮ್ಯವೇ ಅಲ್ಲ, ಅರ್ಥದಲ್ಲಿ ಹೃದ್ಯವೇ ಅಲ್ಲ, ಗೇಯವೂ ಆಗಿರುವ ಇವೆಲ್ಲವೂ ಹಾಡಲಿಕ್ಕೂ ಕೇಳಲಿಕ್ಕೂ, ಸುಶ್ರಾವ್ಯವಾಗಿವೆ. ಇಂಥಾ ಕವಿತೆಗಳನ್ನು ಕನ್ನಡ ಸಾಹಿತ್ಯಕ್ಕೆ ಒದಗಿಸಿರುವ ಬಗ್ಗೆ ಶ್ರೀ ಪುಣಿಂಚತ್ತಾಯರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇನೆ. ಇನ್ನೂ ನಡುಹರೆಯದಲ್ಲಿರುವ ಇವರು ಇಂಥವೇ ಮಾತ್ರವಲ್ಲ, ಮತ್ತೂ ಬೇರೆ ಬೇರೆ ಬಗೆಯ ಹಾಗೂ ಇವಕ್ಕಿಂತ ಉತ್ಕೃಷ್ಟವಾದ ನೂತನ ಕವಿತೆಗಳನ್ನು ರಚಿಸಿ ಕನ್ನಡಕ್ಕೆ ನೀಡುವಂತೆ ಶ್ರೀ ದೇವರು ಅನುಗ್ರಹಿಸಲಿ! ಎಂದು ಇವರಿಗೆ ಶುಭೋದರ್ಕವನ್ನು ಹಾರೈಸುತ್ತೇನೆ. ಇತಿ ಶಮ್.

ಮಂಜೇಶ್ವರ
23 – 12 – 1947

ಗೋವಿಂದ ಪೈ

ವಿಷಯಾನುಕ್ರಮಣಿಕೆ

ಶುದ್ಧಾಶುದ್ಧ ಪತ್ರಿಕೆ

ಪುಟ.	ಪದ್ಯ.	ಪಂಕ್ತಿ.	ತಪ್ಪು.	ಒಪ್ಪು.
2	7	12	ಮಾರ್ತಂಡ	ಮಾರ್ತಾಂಡ
7	7	4	ರಾಜಾಜಿಸೈ	ರಾರಾಜಿಸೈ
14	1	1	ಧಗಿಧಗಿಸುತ್ತಿದೆ	ಧಗಧಗಿಸುತ್ತಿದೆ
15	5	5	ಯಜ್ಞಕುಂಡಲಿ	ಯಜ್ಞಕುಂಡ-ದಲಿ ।
17	1	15	ಸುಂದನು	ಸಂದನು
18	4	9	ಕೀರ್ಕಿಮಯು	ಕೀರ್ತಿಮಯು
21	1	3	ಪ್ರೇಮವಯು ಶ್ರೀವಿಠಲಂ	ಪ್ರೇಮಮಯಂ ಶ್ರೀವಿಠಲ
23	8	16	ಜೋಕೆಯಲ್ಲಿ	ಜೋಕೆಯಲಿ
23	8	17	ಕೊಡುವಮಧುವ	ಕೊಡುವಾಮಧುವ
23	8	18	ಸ್ವಿಕರಿಸುವಾ	ಸ್ವೀಕರಿಸುವಾ
24	10	2	ಧರ್ಮಾತ್ಮರೇಃ	ಧರ್ಮಾತ್ಮರೇ!
24	14	15	ಜೀವ ದನ್ನ	ಜೀವನದನ್ನ
25	18 ·	7	ಶ್ರೆಷ್ಟಕುಲ	ಶ್ರೇಷ್ಠಕುಲ
25	18	15	ಹೊರಗಿಹನೇ	ಹೊರಗಿಹನೆ
26	22	1	ಕುರಿ ಗಳಾ	ಕುರಿಮರಿಗಳಾ
26	27	20	ಹೊರಗಟ್ಟುವ ರೇ	ಹೊರಗಟ್ಟುವವರೇ
27	31	12	ಸಂಗಡಗಳು	ಸಂಗಡಗಳನು
29	41	3	ಬಲವ	ಬಲದ
32	ಕರ್ಣಾಟಕ ಪ್ರಾಂತಿಕ ಪರಿಷತ್ತಿನ ಅಷ್ಟಮಾಧಿವೇಶನ			(೧೦-೫-೧೯೩೫) ಸ್ವಾಗತಗೀತೆ
34	3	15	ಸೊಕ್ಕಿಲ್ಲವೇನು	ಸೊಕ್ಕಲ್ಲವೇನು
35	10	21	ಒಡಲುರಿಸಿ	ಒಡಲುರಿವ
43	3	6	ವತ್ರಪಥ	ವ್ರತಪಥ
45	10	26	ಮಂಗಳೂರು	ಮಂಗಳೂರ
46	11	6	ಗಹರ್ತೆಯು	ಗರ್ಹತೆಯು

ಸ್ವರಾಜ್ಯಗೀತಾಮೃತ

(ದ್ವಿತೀಯ ಭಾಗ)

ರಂಜನಗೀತೆ

ಚಿತ್ತರಂಜನ ಜೋಗುಳ

೧

ಘೋಷಬಂಧು ದಾಸ

ಶ್ರೀ ಲೋಕಮಾನ್ಯ ಮಹಾತ್ಮರಿಗೆರಗಿ ।
ಶ್ರೀ ಲೋಕಬಾಂಧವ ಲಾಲಗೆ ಬಾಗಿ ॥
ಬಾಲಕ ಪುಣ್ಯಶ್ಲೋಕನ ಸ್ಮರಣೆಯನು ।
ಪೇಳುವೆ **ಚಿತ್ತರಂಜನ** ಜೋಗುಳವನು ॥ ಜೋ ಜೋ ॥ ೧ ॥

ಭರತಖಂಡದೆ ಸುಪ್ರಸಿದ್ಧವೆಂದೆನಿಸಿ ।
ಮೆರೆದು ಬಂದಿಹ **ವಂಗದೇಶ**ದೆ ಜನಿಸಿ ॥
ಭರದೊಳಲ್ಲಿಯೆ ಪ್ರೌಢವಿದ್ಯೆಯುಗಳಿಸಿ ।
ಪರದೇಶಗತನಾದೆ ಸುಕಲಾಭಿಲಾಷಿ ॥ ಜೋ ಜೋ ॥ ೨ ॥

ಹಿಂದೂ ಮುಸಲ್ಮಾನ ಮಾನವ ತೆಗೆದು ।
ನಿಂದಿಸಿದಾಂಗ್ಲ **ಜೇಮ್ಸ**ನ ಗರ್ವಮುರಿದು ॥
ಹಿಂದೀದೇಶಾಭಿಮಾನವನೆತ್ತಿ ಹಿಡಿದೆ ।
ವಂದ್ಯ **ವಿವೇಕಾನಂದ**ನ ಹಾಗೆ ನುಡಿದೆ ॥ ಜೋ ಜೋ ॥ ೩ ॥

ದೂರದಾಂಗ್ಲೇಯ ರಾಜಾಸ್ಥಾನದಲ್ಲಿ ।
ಭಾರತ ಪ್ರತಿನಿಧಿಯಾಗುವಾಸೆಯಲಿ ॥
ಧೀರ '**ಪಿತಾಮಹ**' ಪೋದವನೊಡನೆ ।
ಸೇರಿ ಸ್ವರಾಜ್ಯಪಂಥವ ಪಿಡಿದವನೇ ॥ ಜೋ ಜೋ ॥ ೪ ॥

ಇಂತು ವಿಲಾಯತಿಯೊಳಗಿದ್ದು ಕಲಿತು ।
ಸಂತ! '**ವಖೀಲ**'ನೆಂಬಾ ಬಿರುದಾಂತು ॥
ಸಂತೋಷದಲಿ ಜನ್ಮಭೂಮಿಗೆ ಮರಳಿ ।
ಸಂತೃಪ್ತನಾದೆ ವಖಾಲತಿನಲ್ಲಿ ॥ ಜೋ ಜೋ ॥ ೫ ॥

ಆ ವೃತ್ತಿಯಲ್ಲಿ ಸಾಲದೆ ಸಾಲ ತೆಗೆದೆ ।
ಕೋವಿದಮೌಳಿ! 'ದಿವಾಳಿ'ಯನೆಳೆದೆ ॥
ಜೀವನಕಾಸ್ಪದವಿಲ್ಲದಂತಾಗಿ ।
ಕಾವ್ಯಾಂಗನೆಯ ವರಿಸಿದೆ **ಕವಿ**ಯಾಗಿ ॥ ಜೋ ಜೋ ॥ ೬ ॥

ಅರವಿಂದ ಘೋಷನ ಕಾರಾಗಾರವನು ।
ಪರಿಹರಿಸಿದ ನಿನ್ನ ಜಯಘೋಷವನ್ನು ॥
ಧರೆಯರಿಯಲು ನಿನಗೆಣೆಯ ಪ್ರಚಂಡ ।
ನರನಿಲ್ಲವೆಂದಾಯ್ತು! ನ್ಯಾಯ **ಮಾರ್ತಾಂಡ** ॥ ಜೋ ಜೋ ॥ ೭ ॥

ನಿನ್ನ ತಂದೆಗೆ ಬಂದ ಋಣದ ಬಂಧವನು ।
ನಿನ್ನ ದ್ರವ್ಯದೆ ಬಿಡಿಸಿದೆ – **ಪುತ್ರ** – ನೀನು ॥
ನಿನ್ನ ಸಾಲದ ಭಾರವನ್ನಂತೆ ನೀಗಿ ।
ಮಾನ್ಯನೆಂದೆನಿಸಿದೆ ಋಣಮುಕ್ತನಾಗಿ ॥ ಜೋ ಜೋ ॥ ೮ ॥

ದಿನ ದಿನ ತುಂಬಿದ ಧನವಾರಿಯನ್ನು ।
ಕ್ಷಣಿಕ ಭವಾರ್ಣವಕೆರೆಯುದೆಲ್ಲವನು ॥
ದಣಿದ ಸಂಕಷ್ಟ ಜ್ವಾಲಾವೃತ ಜಗವ ।
ತಣಿಸಲು ಸುರಿಸಿದೆ – **ಘನ** – ದಾನ ವಿಭವ ॥ ಜೋ ಜೋ ॥ ೯ ॥

ಹಿಂದೆ ಪಂಜಾಬಿನತ್ಯಾಚಾರದಲ್ಲಿ । ೧೩–೪–೧೯೧೯.
ಹಿಂದೀಯರತಿನೊಂದು ಬೆಂದ ಕಾಲದಲಿ ॥
ನಿಂದ್ಯ **ದಯಾರಹಿತ**ರ ಮುಂದೆ ನಿಂದು :
ಬಂದು ದೀನರ ಪೊರೆದಾ – **ಘೋಷಬಂಧು!** ॥ ಜೋ ಜೋ ॥ ೧೦ ॥

೨

ದೇಶಬಂಧು ದಾಸ

ಶ್ರೀ ತಿಲಕಾವತಾರಾವಸಾನದಲಿ ।
ಶ್ವೇತವಾಹನನಂತೆ ತಿಲಕಾಸ್ಥಾನದಲಿ ॥

"**ನೂತನಚಕ್ರ**" ಸಾರಥಿಯಾಗಿ ನಿಂದು !
ಮಾತೃಭೂಮಿಯು ಸೇವಿಸಿದ **ದೇಶಬಂಧು!** ॥ ಜೋ ಜೋ ॥ ೧ ॥

ಅಸಹಕಾರಾಹವ ಸಿಂಹನಾದವನು ।
ದೆಸೆದೆಸೆಯೊಳು ವೀರ**ಕೇಸರಿ** ನೀನು ॥
ಪಸರಿಸಿ ಪರರ ಬಂಧನದ ಕಂದರವ ।
ನಸುನಗೆಯಿಂದ ನುಗ್ಗಿದೆ ಸುಪ್ರಭಾವ ॥ ಜೋ ಜೋ ॥ ೨ ॥

ಆ ಸೆರೆಯುನು ವಿಶ್ರಾಮಧಾಮಗೈದು ।
ದೇಶದೇಶದೊಳುಪದೇಶಕ್ಕೈತಂದು ॥
'**ದಾಸ**' ನಾಮವ ಸಾರ್ಥಗೊಳಿಸಿದೆ ಗುಣದೆ ।
'**ದೇಶಸೇವೆಯೆ ಈಶಸೇವೆ**'ಯೆಂದೊರೆದೆ ॥ ಜೋ ಜೋ ॥ ೩ ॥

ಭಾರತೋನ್ನತಿಗಾಗಿ ಪತ್ನೀಪುತ್ರರನು ।
ಘೋರ ತುರಂಗಕೆ ಕಳುಹಿಸಿದವನು ॥
ಭಾರತೀ ಪ್ರಿಯಪುತ್ರ! ನೀನೋರ್ವನೆಂದು ।
ಸಾರುವುದೀ ಜಗ **ಭಾರತಬಂಧು!** ॥ ಜೋ ಜೋ ॥ ೪ ॥

ನೆರೆದ **ಗಯಾಸಭೆ**ಗಧ್ಯಕ್ಷನಾಗಿ ।
ನರರೊಳನಭಿಷಿಕ್ತ 'ನೃಪ'ನಂತೆ ಬೆಳಗಿ ॥
ಪರರ**ನಹಿಂಸಾ**ಯುದ್ಧದೆ ಗೆಲ್ವುದೆಂದೇ ।
ವರ **ಬುದ್ಧ, ಗಾಂಧಿ**ಗಳಂತೆ ಬೋಧಿಸಿದೆ ॥ ಜೋ ಜೋ ॥ ೫ ॥

ವಂಗದೇಶದೊಳನ್ಯ **ವಂಚಕ**ರಿಳಿದು ।
ಕಂಗೆಡಿಸುವ ತಂತ್ರಮಂತ್ರವ ತಿಳಿದು ॥
ರಂಗಕೆ ಸೆಳೆದು ಗರ್ಜಿಸಿ ಹಿಂಗಿಸುವುದು ।
ವಂಗೋಗ್ರವ್ಯಾಘ್ರನುದಗ್ರ ಲೀಲೆಯುದು ॥ ಜೋ ಜೋ ॥ ೬ ॥

ಬಂಗಾಳದೊಳು ಪರ**ರಾಜ**ಸಂಸ್ಥೆಯನು ।
ಭಂಗಿಸಿ ತೋರಿದೆ ರಾಷ್ಟ್ರಪಂಥವನು ॥
ತುಂಗ **ಸ್ವರಾಜ್ಯ**ಪಕ್ಷದ ಮೂಲಾಧಾರಾ ।
ಮಂಗಲಕರ ಲೋಕನೇತ್ರ **ಕುಮಾರಾ!** ॥ ಜೋ ಜೋ ॥ ೭ ॥

೩

ಈಶಬಂಧು ದಾಸ

ಸಾರ್ವಜನಿಕ ಸಂಸ್ಥೆಗನುರಾಗಿಯಾಗಿ ।
ಸರ್ವಸ್ವವನು ಧಾರೆಯೆರೆದ ವಿರಾಗಿ ॥
ಉರ್ವೀಶವೈಭವ ಲೋಕಾಭಿರಾಮು ।
ಸರ್ವಜನಾನುರಂಜನ ಸಾರ್ವಭೌಮು ॥ ಜೋ ಜೋ ॥ ೧ ॥

ಪೂರ್ಣ ಸ್ವರಾಜ್ಯಾರ್ಜನೆಗೆ ಬಲಿಯಾಗಿ ।
ತನ್ನಾತ್ಮ ಯಜ್ಞವಮಾಡಿದ ಕರ್ಮಯೋಗಿ ॥
ಪುಣ್ಯಾತ್ಮನಮಗೀಯೊ ನಿನ್ನ ಚೇತನವ ।
ಪುಣ್ಯಭೂಮಿಯ ಚಿತ್ತರಂಜನ ದೇವ ॥ ಜೋ ಜೋ ॥ ೨ ॥

ಮಾನ್ಯತಿಲಕನಂತೆ ಲೋಕಸೇವೆಯಲಿ ।
ಜೀರ್ಣವಾಗಿಹ ಜಡದೇಹವನಗಲಿ ॥
ಧನ್ಯಾತ್ಮ ಕೀರ್ತಿಕಾಯವನಾಂತು ಮೆರೆವೆ ।
ಸ್ವರ್ಣಧಾರಿಣಿಯೊಳನಂತನಾಗಿರುವೆ ॥ ಜೋ ಜೋ ॥ ೩ ॥

ಕಲಿಪಾರ್ಥನಂತೆ ಮಹಾವೀರನಾಗಿ ।
ಕಲಿಕರ್ಣನಂತೆ ಮಹಾತ್ಯಾಗಿಯಾಗಿ ॥
ಇಳೆಯಾಣ್ಮ ಜನಕಸನ್ನಿಭ ರಾಜಯೋಗಿ ।
ನಲಿದೆ ಪ್ರತಾಪಕಂಠೀರವನಾಗಿ ॥ ಜೋ ಜೋ ॥ ೪ ॥

ವಿದ್ಯಾಸಾಗರನಂತೆ ವಿದ್ವಾಂಸನಾಗಿ ।
ಬುದ್ಧಸಾಧುವಿನಂತೆ ಭೋಗವನೀಗಿ ॥
ಇದ್ದುದೆಲ್ಲವ ದಾನಮಾಡುತೆ ನಡೆದೆ ।
ಶುದ್ಧ ಹರಿಶ್ಚಂದ್ರನಂತೆ ರಾಜಿಸಿದೆ ॥ ಜೋ ಜೋ ॥ ೫ ॥

ಭುವನಮೋಹನದಾಸ ನಂದನ – ದಾಸ ।
ಯುವತೀ ವಸಂತೀಮನೋಹರ – ದಾಸ ॥
ಕುವರ ಶ್ರೀ ಚಿರರಂಜನಾಶ್ರಯಸಿಂಧು ।
ಕುವರೀದ್ವಯಾನ್ವಿತ ಜಗದೀಶಬಂಧು! ॥ ಜೋ ಜೋ ॥ ೬ ॥

ಚಿತ್ತರಂಜನದಾಸ ಜೋಗುಳವಿದನು ।
ನಿತ್ಯವೂ ಪೇಳುವ ಸಾಧ್ವಿಯು ಸುತನು ॥
ಚಿತ್ತರಂಜನನಂತೆ ಜಗದೆ ರಂಜಿಪನು ।
ನಿತ್ಯಾತ್ಮ **ಲಕ್ಷ್ಮೀಶ**ನವನ ರಕ್ಷಿಪನು ॥ ಜೋ ಜೋ ॥ ೭ ॥

[~~‘ಲೋಕಪಾವನ’, ‘ಕಾನಡಾ ಧುರೀಣ’, ‘ರಾಜಹಂಸ’~~ [೧೯೨೫.]

ದಿವಂಗತ

ಚಿತ್ತರಂಜನಸ್ತವನ

ನಿಧನ ೧೬-೬-೨೫.

~~ಧಾಟಿ:— (ಸ್ವಾಮಿ ದೇವನೆ ಲೋಕ~~ ಪಾಲನೆ)

ಪೋದನೇ! ಹಾ! ಭಾರತಾಂಬೆಯ । ಬಾಲ**ದಾ**ಸನು ಪೋದನೇ! ॥ ಪ. ॥
ಪೋದನೇ! ಘನ । ಚಿತ್ತರಂಜನ । **ಚಿತ್ತರಂಜನ** । ಪೋದನೇ! ॥ ಅ. ಪ. ॥
ವೈರಿಭೀಕರ । **ವಂಗಸಿಂಹ**ನು । ನಡೆದನೇ! **ಕೈಲಾಸ**ಕೆ! ।
ಧಾರಿಣೀಹಿತ । **ವಿಬುಧವರ್ಯ**ನು । ನಡೆದನೇ! **ಸ್ವಾರಾಜ್ಯ**ಕೆ! ॥ ೧ ॥
ಆ **ತಿಲಕ**ನೆಡೆ । ಗೈದಿದನೆ ಹಾ! । ದಾಸ ಕಣ್ಮರೆಯಾದನೇ! ।
ಕೀರ್ತಿಕಾಯವ । ನುಳಿದು ಧರೆಯಲಿ । **ಭಾರತಾರ್ಜುನ** । ನಳಿದನೇ! ॥ ೨ ॥
ಶ್ರೀ **ವಸಂತೀದೇವಿ** ಧರಿಸಿದ । ಫಾಲ ಕುಂಕುಮವಳಿಸಿದೆ ।
ದೇವನೇ! ನೀನೇಕೆ ನಿರ್ದಯ । ನಾದೆ! ಕರುಣಾವಾರಿಧೇ! ॥ ೩ ॥
ಅಕಟ ಧರೆಗೀ । ವಿಧಿಯೆ? ವಿಧಿಯೇ! । ನಮ್ಮ ದಾಸನೊಯ್ದೆಯಾ? ।
ಸಕಲ ಜನನುತ । ದೇಶಭಕ್ತನ । ನಮ್ಮ ಬಳಿಯಿಂದೆಳೆದೆಯಾ? ॥ ೪ ॥
ದಾನಶೂರನು । ಕುಸುಮ ಹೃದಯನು । ವಿಮಲ ವಜ್ರ ಕಠೋರನು ।
ಜ್ಞಾನಸೂರ್ಯನು । ಭಾರತಾರ್ಯನು । **ದೇಶ**ದಾಸನು **ದಾಸನು** ॥ ೫ ॥
ಅಮಲ ಚರಿತನು । ಸುಗುಣ ಭರಿತನು । ಭುವನಮಾನ್ಯನು ಧನ್ಯನು ।
ಅಮಿತ ವಿಭವಾ । ನ್ವಿತನು—ಖ್ಯಾತನು । ಪರಮಸಂತನು ಸಂದನು! ॥ ೬ ॥
ಘೋಷ ಹಿತಕರ । **ಗಾಂಧಿ** ಪ್ರಿಯಕರ । ಭರತಖಂಡ ಸುಖಂಕರ ।
ದೇಶಬಾಂಧವ । **ದಾಸ**ನಾತ್ಮಕೆ । ಶಾಂತಿಯಾಗಲಿ **ಶ್ರೀಕರಾ** ॥ ೭ ॥

[~~‘ಸ್ವದೇಶಾಭಿಮಾನಿ’~~ [೧೯೨೫.]

ಬಂಧುಜೋಗುಳ

ಜಯ '**ಲೋಕಮಾನ್ಯ**' ಭಾರತ '**ರಾಷ್ಟ್ರಬಂಧು**' ।
'**ಜಯಕರ್ಣಾಟಕ**' ಭಾಷಾಸಿಂಧು ಬಾಲೇಂದು ॥
ಜಯವೀವ ನಿನಗೆ '**ಸದಾಶಿವ**'ನೊಲಿದು ।
ಜಯಶಾಲಿಯಾಗಿರ್ರೈ ಜಗದೀಶ ಬಂಧು! ॥ ಜೋ ಜೋ ॥ ೧ ॥

'**ದೇಶಬಂಧು**'ವಿನ ಸಂದೇಶವ ತಿಳಿದು ।
'**ದೇಶಸೇವೆಯು ಈಶಸೇವೆ**'ಯೆಂದೊರೆದು ॥
ದೇಶಮಾತೆಯು ಕ್ಲೇಶಪಾಶವ ಕಡಿದು ।
ದೇಶೋದ್ಧಾರಕನಾಗಿರ್ರೈ '**ದೇಶಬಂಧು!**' ॥ ಜೋ ಜೋ ॥ ೨ ॥

'**ಲೋಕಮತ**'ವೆ ತನ್ನ ಮತವೆಂದು ಬಗೆದು ।
ಲೋಕದ ಮತಭೇದವಾದವನೊಗೆದು ॥
'**ಲೋಕರಹಸ್ಯ**'ವ ಬೆಳಕಿಗೆ ತಂದು ।
ಲೋಕೋದ್ಧಾರಕನಾಗಿರ್ರೈ '**ಲೋಕಬಂಧು!**' ॥ ಜೋ ಜೋ ॥ ೩ ॥

ಆರ್ತಪ್ರಲಾಪವ ಚಿರಶಾಂತಿಗೊಳಿಸಿ ।
ಧೂರ್ತಪ್ರತಾಪಕೆ ವಿಶ್ರಾಂತಿಕೊಡಿಸಿ ॥
ಸ್ವಾರ್ಥವಿಲ್ಲದೆ ಸಾಧುಪಕ್ಷದೆ ನಿಂದು ।
ಆರ್ತೋದ್ಧಾರಕನಾಗಿರ್ರೈ '**ದೀನಬಂಧು!**' ॥ ಜೋ ಜೋ ॥ ೪ ॥

ಕುಸುಮಾತ್ಮವನು ತೋರು ಸುಜನಸಂಕುಲಕೆ ।
ವಿಷಮುವಜ್ರಾತ್ಮವ ದುರ್ಜನ ಕುಲಕೆ ॥
ಅಸಮಧೀರನು '**ಕರ್ಮವೀರ**' ನೀನೆಂದು ।
ಹೆಸರನಾಂತಿರು '**ಕಂಠೀರವ**'ನಂತೆ ಮೊರೆದು ॥ ಜೋ ಜೋ ॥ ೫ ॥

'**ಸಾಧ್ವಿ**' ವೈಭವದೆ '**ಸ್ವಧರ್ಮ**' ನೀತಿಯನು ।
ವಿದ್ವಾಂಸರಿಗೆ '**ಸರಸ್ವತಿ**'ಯ '**ಶಕ್ತಿ**'ಯನು ॥
ಸದ್ಧರ್ಮ ಸತ್ಕರ್ಮ ಸತ್ಪಥಗಳನು ।
ಶ್ರದ್ಧೆಯಿಂದಿಳೆಗೆ ಸಾರ್ರೈ '**ಸುಬೋಧ**'ವನು ॥ ಜೋ ಜೋ ॥ ೬ ॥

ಭಾರತೀಪ್ರಿಯ ಸುಕುಮಾರ '**ಧುರೀಣ**' ।
ಭಾರತೀ ಘನಕೀರ್ತಿ ನಾರಿಯ ರಮಣ ॥
ಭಾರತ '**ಲೋಕಪಾವನ**' '**ವಿಶ್ವಬಂಧು**' ।
ರಾರಾಜಿಸೈ '**ನವಯುಗ**'ದ ಸುಬಂಧು ॥ ಜೋ ಜೋ ॥ ೭ ॥

'**ವಿಶ್ವಭಾರತ**' ಭದ್ರ '**ರಂಗಭೂಮಿ**'ಯಲಿ ।
ವಿಶ್ವ '**ವೈಭವ**' '**ಸಂಪದಭ್ಯುದಯ**'ದಲಿ ॥
'**ವಿಶ್ವಕರ್ಣಾಟಕ**' '**ಕೇಸರಿ**'ಯೆನಿಸಿ ।
ವಿಶ್ವ '**ಪ್ರೇಮ**'ವ ಸಾಧಿಸೈ ಸಹಕರಿಸಿ ॥ ಜೋ ಜೋ ॥ ೮ ॥

ಜಯತು '**ಸ್ವದೇಶಾಭಿಮಾನಿ**' ಸುಜ್ಞಾನಿ ।
ಜಯತು '**ಸ್ವರಾಜ್ಯ**' ಸಾಮ್ರಾಜ್ಯ ಪ್ರಧಾನಿ ॥
ಜಯಘನ '**ಹಿಂದೂ**' '**ಮೋಹನದಾಸ**' ಬಂಧು ।
ಜಯ ಜಯ ಜಯ '**ಲಕ್ಷ್ಮೀಪ್ರಿಯ**' '**ರಾಷ್ಟ್ರಬಂಧು**'
॥ ಜೋ ಜೋ ॥ ೯ ॥

[~~'ರಾಷ್ಟ್ರಬಂಧು' ಪ್ರಥಮ ಸಂಚಿಕೆ ೭-೫-~~ ೧೯೨೮]

ಲಾಲವಿಲಾಪ

[ಜನನ ೧೮೬೫ — ಮರಣ ೧೭-೧೧-೧೯೨೮]
ಧಾಟಿ:-(ಜೈ ಕವೀಂದ್ರ । ಶ್ರೀ ರವೀಂದ್ರ)

ಪೋದೆಯಾ! ಸ್ವರಾಜ್ಯವೀರ । ನರಲಲಾಮ **ಲಾಲನೇ!** ॥ ಪ. ॥
ಪೋದೆಯಾ! ಸ್ವದೇಶಭಕ್ತ । '**ರಾಧಾಕಿಶನ**' ಬಾಲನೇ! ॥ ಅ. ಪ. ॥

ಭಾರತಾರ್ಯ **ಧರ್ಮ**ವೀರ । ಶ್ರೀ **ದಯಾನಂದಾ**ನಂದ ॥
ವೀರಶಿಷ್ಯ ಕರ್ಮವೀರ । ದಾನಶೂರ ಸಂಪದ ॥ ೧ ॥

ದೇಶಸೇವೆಗಾಗಿ ವಿವಿಧ । ಕ್ಲೇಶಗಳಿಗೆ ಸಿಲುಕಿದ ॥
'ದೇಶಬಂಧು' 'ಲೋಕಮಾನ್ಯ' । **ತಿಲಕ** ಸಖ ಸು**ಖಾ**ಸ್ಪದ ॥ ೨ ॥

ದೇಶ ದೇಶಗಳಲಿ ತೊಳಲಿ । ಲೋಕಮತವ ಪಡೆಯುತ ॥
ಆ 'ಸ್ವರಾಜ್ಯ ಯಜ್ಞಬಲಿ'ಗೆ । ತನುವನಿತ್ತ ಧೀಯುತ ॥ ೩ ॥

ಭಾರತಕೆ ಸ್ವರಾಜ್ಯವಿಭವ । ಪದವ ಪಡೆವ ಪಂಥವ ॥
ತೋರಿದಾ ಮಹಾನುಭಾವ । ಪಡೆದೆಯಾ ಸಾಯುಜ್ಯವ ॥ ೪ ॥

ಭಾರತೀಸ್ವತಂತ್ರ ಸಮರ । ಚದುರ ವಿಜಯದೈಸಿರಿ ॥
ವೀರಸ್ವರ್ಗ ಸಾಧಿಸಿದೆಯಾ । ರಾಷ್ಟ್ರವೀರ ಕೇಸರಿ! ॥ ೫ ॥

[ಸ್ವದೇಶಾಭಿಮಾನಿ–೧೯೨೫]

ವೀರಪ್ರಲಾಪ

ಧಾಟಿ: (ಕಡು ಧೀರನೆ – ಶೂರನೆ)

ಪ್ರಿಯ । **ಲಾಲ**ನು ಕಣ್ಮರೆಯಾದನೆ ಪೋದನೆ! । ದೀನಪಾಲ । **ಲಾಲ** ॥ ಪ. ॥
ಭಾರತಕೇಸರಿಯಂದದೆ ಮೊರೆದು ।
ಭಾರತ ರಣರಂಗದೆನೆರೆ ಮೆರೆದು ।
ವೀರ ಸ್ವರ್ಗವನು ಪಡೆದನೆ! ನಡೆದನೆ! ರಾಷ್ಟ್ರವೀರ! । **ಲಾಲ** ॥ ೧ ॥

[ನವಯುಗ'–'ಸ್ವಧರ್ಮ' ೧೯೨೮]

ಬಂಧುಸಂದೇಶ

ಧಾಟಿ: (ಶ್ರೀಮಹಾತ್ಮಗಾಂಧಿ ನಮೋ)

ರಾಜಿಸೈ ಸ್ವದೇಶಬಂಧು । 'ರಾಷ್ಟ್ರಬಂಧು' ರಾಜಿಸೈ ॥ ಪ. ॥
ರಾಜಿಸೈ ವಿಚಾರಸಿಂಧು । ಭೂಷಣೇಂದು ರಾಜಿಸೈ ॥ ಅ. ಪ. ॥

ನಿನ್ನ ದೇಶಭಾಷೆಗಳನು । ಧರ್ಮಕರ್ಮ ಕೃತಿಯನು ॥
ಮನ್ನಿಸುವ ಮಹಾತ್ಮ ನೀನು । ಗಣ್ಯ ಪುಣ್ಯವಂತನು ॥ ೧ ॥

ಲೋಕಮತವೆ ನಿನ್ನ ಮತವು । ಲೋಕಹಿತವೆ ವಿಹಿತವು ॥
ಲೋಕಪಥವೆ ನಿನಗೆ ಪಥವು । ಲೋಕಮಾನ್ಯ ಪಂಥವು ॥ ೨ ॥

ರೀತಿ ನೀತಿಗಳನು ತಿಳಿದು । ಪ್ರೀತಿಯಿಂದ ನುಡಿವುದು ॥
ಮಾತಿನಂತೆ ನಡೆಯುತಿಹುದು । ಖ್ಯಾತಿ ನಿನಗೆ ನಿಜವಿದು ॥ ೩ ॥

ಧರೆಯು ಸೇವೆಗಾಗಿ ಜನಿಸಿ । ಧರೆಯು ಮೊರೆಯು ಲಾಲಿಸಿ ॥
ಧರೆಗೆ ಸುಖದ ಕಾರ್ಯವಹಿಸಿ । ಧರೆಯೊಳೆಸೆವ ಸಾಹಸಿ ॥ ೪ ॥

ಭಾರತಾಭಿರಾಮನೆಂದು । ಮುಂದೆ ನಿಂದು ಶೋಭಿಸೈ! ॥
ಭಾರತಾರ್ಯ 'ಲೋಕಬಂಧು' । ರಾಜಿಸೈ ವಿರಾಜಿಸೈ ॥ ೫ ॥

[ರಾಷ್ಟ್ರಬಂಧು – ವಿಶೇಷ ಸಂಚಿಕೆ ೧೯೨೮]

ಲೋಕಶೋಕ

೧೯೩೦

(ಭಾಮಿನಿ)

ಅಡವಿಯೊಳಗಡಗಿರುವರಕಟಾ ।
ಬಡಕುಟುಂಬದ ಹಲವು ಸಾಧ್ವಿಯ ।
ರುಡುವುದಕೆ ಮಾರುದ್ದ ಬಟ್ಟೆಗೆ ತಮಗೆ ಗತಿಯಿರದೆ ॥
ಒಡಲ ಮಕ್ಕಳ ಬಾವಿಗೆಸೆವರು ।
ಸುಡುವ ಹೊಟ್ಟೆಯು ತಣಿಸಲಾರದೆ ।
ಮಡಿಯುತಿರುವರು ಹಲರು ಬಡವರು ಸ್ವರ್ಣಭೂಮಿಯಲಿ! ॥ ೧ ॥

ಸೃಷ್ಟಿಕರ್ತನ ಪರಮಕರುಣಾ ।
ದೃಷ್ಟಿಯಲಿ ತಾನಾಗಿ ವನದೊಳು ।
ಹುಟ್ಟಿಬೆಳೆದಳಿವಾ ಮಹಾವೃಕ್ಷಗಳ ಕಟ್ಟಿಗೆಯ ॥
ಕಟ್ಟಿತಂದರೆ ಗಂಜಿ ಬೇಯಿಸು ।
ವಷ್ಟರ ಸ್ವಾತಂತ್ರ್ಯವಿಲ್ಲದೆ ।
ಕಷ್ಟಪಡುವರು ಹಲರು ಬಡವರು ಸ್ವರ್ಣಭೂಮಿಯಲಿ! ॥ ೨ ॥

ಕ್ಷಾರವಾರಿಧಿಯಲ್ಲಿ ಚರಣಾಂ ।
ಭೋರುಹವು ರಂಜಿಸುವ ವಿಭವದ ।
ಭಾರತಾಂಬೆಯು ಮಕ್ಕಳುಪ್ಪನ್ನಾಯ್ದುಕೊಳ್ಳುವರೆ ॥
ಕ್ರೂರಶಾಸನ ಬಾಧೆಯೆನಲದ ।
ನಾರು ಸೈರಿಸಲಾಪರಕಟ! ಕ ।
ಠೋರ ಚಿಂತೆಯೊಳಿಹರು ಹಲವರು ಸ್ವರ್ಣಭೂಮಿಯಲಿ! ॥ ೩ ॥

ಧಾರಿಣಿಯು ಹೊಲವಧಿಕ ಧನಿಕರ ।
ಸೇರಿಹುದು ಬಿಟ್ಟುಳಿದ ನೆಲವನು
ಸೇರಿಹರು ಸಂಕಷ್ಟಜೀವಿಗಳಾದ ಬಡಜನರು ॥
ಕ್ರೂರ ಭೂಸ್ವಾಮ್ಯಲಿಕರ ಮುಷ್ಟಿಯು ।
ವಿಾರಿದಾ ಬಗೆಬಗೆಯ ಕರಗಳ ।
ಘೋರಹತಿಯಲಿ ಬಳಲುತಿರುವರು ಸ್ವಣಭೂಮಿಯಲಿ! ॥ ೪ ॥

['ಬಡವರ ಬಂಧು' = ವಿಶೇಷ ಸಂಚಿಕೆ.]

ಉಪ್ಪಿನಕದನ

೬-೫-೩೧

ಧಾಟಿ:- (ಭಾರತೀಯರ ನೆವ್ವ್)

'ಉಪ್ಪಿನ ಕದನ'ಕೆ ಹೊರಡಿರಿ ಜನರೇ ।
'ಉಪ್ಪಿ'ಗೆ ಬೇಕಾಗಿ ಹೋರಾಡಿ ಭಟರೇ ॥ ಪ. ॥
ಉಪ್ಪಿಗೂ ಗತಿಯಿಲ್ಲವೆಂದರೇನರ್ಥ? ।
ಉಪ್ಪನ್ನು ಗಳಿಸಲಾರದ ಬಾಳು ವ್ಯರ್ಥ. ॥ ಅ. ಪ. ॥

ಕ್ಷಾರವಾರಿಧಿಯಲ್ಲಿ ಕಾಲ್ಗಳ ತೊಳೆವ ।
ಭಾರತೀಸುತರಿಗುಪ್ಪಿಲ್ಲವೆ ದೇವ? ॥
ಕ್ರೂರಶಾಸನವ ಧಿಕ್ಕರಿಸಿ ಮುಂದರಿವ ।
ವಾರಿಧಿಯಿಂದುಪ್ಪನ್ನಾಯ್ದು ತಂದಿಡುವ ॥ ೧ ॥

೬-೫-'೩೧-'ದಂಡಿಯಾತ್ರೆ'ಗೆ ಹೊರಟಿಹನು 'ಮಹಾತ್ಮ' ।
ಖಂಡಿಸಿ ಸರಕಾರದಾಜ್ಞೆಯನಮಮ! ॥
ಉಂಡುಮಲಗಿ ನಿದ್ದೆಯಲ್ಲಿ ಬಿದ್ದಿರದೆ ।
ತಂಡತಂಡಗಳಾಗಿ ಬನ್ನಿರಿ ಭರದೆ ॥ ೨ ॥

ಸೇತುಬಂಧನ ಕಾರ್ಯದಲಿ ರಾಮನಲ್ಲಿ ।
ಧಾತ್ರಿಯೆ ಸಹಕರಿಸಿದ ರೀತಿಯಲ್ಲಿ ॥
ಖ್ಯಾತ ಮಹಾತ್ಮನ ಕರೆಗನುಸರಿಸಿ ।
ಪ್ರೀತಿಯಿಂ'ದಳಿಲ ಭಕ್ತಿಯು' ನಲವಿರಿಸಿ ॥ ೩ ॥

'ಪರ'ದಶಕಂಠನ ಬಂಧವ ಕಡಿದು ।
ಧರಣಿಜೆಯನು ತರಲಿಲ್ಲವೇನಂದು? ॥
ಧರೆಯಭಿರಾಮನಾಗಿರುವ ಗಾಂಧಿಜಿಯು ।
ಹೊರಟರೆ ಸಿಗಳೆ 'ಸ್ವರಾಜ್ಯ'ಭೂಮಿಜೆಯು? ॥ ೪ ॥

ವೀರವೀರೆಯರೆಲ್ಲ ಸಮರಕೆ ಬನ್ನಿ ।
ಧೀರ "ಮಹಾತ್ಮಾಗಾಂಧೀಕಿ-ಜೈ"-ಯೆನ್ನಿ ॥
ಆ 'ರತ್ನಾಕರ'ದಿಂ ಬೇಕಾದುದ ತನ್ನಿ ।
"ಭಾರತಮಾತಾಕೀ-ಜೈ" "ಜೈ"ಯೆಂದನ್ನಿ! ॥ ೫ ॥

[~~ಪದ್ಯದ ಕೊನೆಯಲ್ಲಿ 'ಜೋ ಜೋ' ಎಂದು ಸೇರಿಸಿ 'ಜೋಗುಳ ಧಾಟಿ'~~ಯಲ್ಲಿಯೂ ಹಾಡಬಹುದು.] [೧೯೩೧]

ಮೋತಿಲಾಲ ಸ್ಮೃತಿ

(ಜನನ: 6–5-1861 — ನಿಧನ: 6–2–1931)

(ಲಾವಣಿ)

ಅಕಟಾ! **ಪಂಡಿತ ಮೋತಿಲಾಲ**ನೇ । ಸ್ವರ್ಗವ ಸೇರಿದನೇ! ॥ ಪ. ॥
ಸುಖಯುತ **ದಶರಥ**ನಂತೆ ವಿರಾಜಿಸಿ । ಸುರಪಸಹಾಯಕೆ ಸಾರಿದನೇ ॥ ಅ.ಪ. ॥

ರಘುಪತಿ **ರಾಮ**ನ ಸುಗುಣಾರಾಮನ । ಪೋಲ್ವಸುಪುತ್ರನ ನಗಲಿದನೇ ॥
ಜಗದಭಿರಾಮ **ಕುಮಾರ** ಜವಾಹರ । ಲಾಲನ-ಬಾಲನ ತೊಲಗಿದನೇ ॥ ೧ ॥

ಪರದೇಶೀಯರ ಲಾಠೀ ರಾಜ್ಯದೆ । ಬಾಳಲಾಗದೆಂದ್ಯೆದಿದನೇ ।
ಸೆರೆಡೆಯಲ್ಲಿ '**ಮಹಾತ್ಮ**'ರ ಕಷ್ಟವ । ನೋಡಲಾಗದೆಂದೋಡಿದನೇ ॥ ೨ ॥

ಪರಬಲದಿಂದಬಲೆಯರನು ಸೆಳವುದ । ನೀಕ್ಷಿಸಲಾರದೆ ನಡೆದಿಹನೇ! ॥
ತರಳರ ಕೊರಳನು ಬಾಗಿಸಿ ಬಡಿವುದ । ಸೈರಿಸಲಾರದೆ ತೆರಳಿದನೇ! ॥ ೩ ॥

ಧರ್ಮನ ಧರ್ಮವ, ಭೀಮನ ಧೈರ್ಯವ । ವಿಜಯನ ಶೌರ್ಯವ ನಾಚಿಸುವ ॥
ಕರ್ಮವೀರವರ ಭಾರತ ಭೀಷ್ಮನು । ದೇಹವನೀಗಿದನೇ ದೇವ! ॥ ೪ ॥

ಸ್ವರ್ಣಭೂಮಿಯಲಿ ಧನಪನ ಧನದಿಂ । ದೆಸೆದವ ನವ ಸುರಪತಿಯಂತೆ ॥
ಕರ್ಣ, ದಧೀಚಿ, ಶಿವಾಜಿಗಳಂತೆ ವಿ । ರಾಜಿಸಿದನು ಶಿಬಿ ನೃಪನಂತೆ ॥ ೫ ॥

ಭಾವಿ **ಸ್ವರಾಜ್ಯದ ಮಂತ್ರಿಯಾಗಿ** । ಮೇಲಾಗಿ–ರಾಜನೇ ತಾನಾಗಿ ॥
ಜೀವಿಸುವಾಸೆಯ ಬಯಸದೆ ನಡೆದನೆ । ರಾಜಯೋಗಿ ಸರ್ವತ್ಯಾಗಿ! ॥ ೬ ॥

ಭಾರತಮಾತೆಯ ಸೇವೆಗಾಗಿ ಸ । ರ್ವಸ್ವವ ನೀಯುತ 'ಜವಹರ'ನ ॥
ಭಾರತಮಾತೆಯ ಪದತಲಕರ್ಪಿಸಿ । ಸೇರಿದನೇನು ಜಗನ್ಮಯನ ॥ ೭ ॥

ಬಾಲ **ತಿಲಕ,** ಜಯಶೀಲ **ಲಾಲ,** ಜನ । ರಂಜನ**ದಾಸ**ರ ಪಥವಿಡಿದು ॥
ಶ್ರೀಲೋಲನ ಸಾಯುಜ್ಯಕೆ ಪೋದನೆ । **ಮೋತಿಲಾಲ** ಭಾರತಬಂಧು! ॥ ೮ ॥

[~~'ಕಂಠೀರವ' ೧೦-೨-೧೯೩೧. 'ಸುಬೋಧ' 'ಸರಸ್ವತಿ'~~ ಫೆಬ್ರವರಿ ೧೯೩೧.]

ಆತ್ಮಯಜ್ಞ

(ವಾರ್ಧಿಕ್ಯ)

ಅತುಲ ಭುಜಬಲ ಭೀಮಸುತ ನೂರ್ಧ್ವ ಕೇಶಿತಾ ।
ನತಿಗರ್ವದಿಂದಂದು ಕಡಲಕರೆಯೊಂದರಲಿ ।
ಅತಿದೀರ್ಘವಹ ತನ್ನ ಪದವೊಂದನಿರಿಸಿ ಮತ್ತೊಂದ ನಿನ್ನೊಂದುದಡದಿ ॥
ಜತನದಿಂದಿಟ್ಟೊಂದು ಖಡ್ಗಮಂ ಮಸೆವಸಂ ।
ಗತಿಯ ಮಾಯಾವಿ ಲೀಲಾಲೋಲನೀಕ್ಷಿಸುತ ।
ಕ್ಷಿತಿಸುರನ ವೇಷಮಂತಾಳ್ದು ಬಂ'ದೀತೆರದೆ ಗೈವುದೇಕೆ'ಂದೊರೆಯಲು ॥ ೧ ॥

'ಭಾರತ ಮಹಾಹವ'ಕೆ ಸಿದ್ಧನಾಗುತೆ ಮುಂದೆ ।
ವೈರಿ ವಂಶಕುಠಾರನೆನಿಸಲೆಸಗುವೆ'ನೆನಲ್ ।
ನಾರಾಯಣಂ ಕೇಳಿದಂ 'ಪೋರ! ನೀಗೈವುದೇನೆಂದು' ಭೀಮಜನೊಳು ॥
ವೀರನಾಗಲ್ಲಿರ್ದ ಅಶ್ವತ್ಥ ವೃಕ್ಷ ಕಾ ।
ಕೂರಾದ ಕತ್ತಿಯಿಂ ಕಡಿಯಲಾಗೇನೆಂಬೆ! ।
ಭೂರುಹದೆ ಸಾರ್ಧ ಪಂಚಕಪತ್ರಗಳನುಳಿದು ಮಿಕ್ಕೆಲೆಗಳೆಲ್ಲಬೀಳೆ ॥ ೨ ॥

'ಎಸಿದ್ದೈ ವೃಕ್ಷದೊಳ್ ಸಾರ್ಧಪಂಚಕ ಪರ್ಣ ।
ಕಾಣುವುದು ಪೇಳೆ'ಂದು ಹರಿಯು ಕೇಳಿದ ನುಡಿಗೆ ।
'ತನ್ನ ಪಿತೃವೈರಸ್ಸುಳಿಸಿ, ಮುಂದಿನಹುವದಿ ಕೃಷ್ಣನೆರಡೂ ಕಡೆಯೊಳು ॥

ಸಾನುರಾಗವ ತೋರ್ಪನದರಿಂದ ಕೌರವರ ।
ಪ್ರಾಣತೆಗೆವಾಗ ರಿಪು ಪಕ್ಷಾರ್ಥದಾ ಹರಿಯು ।
ಪ್ರಾಣಾರ್ಥವನ್ನಳಿಸಿ ನಮ್ಮ ಪಕ್ಷದ ಹರಿಯ ಪ್ರಾಣಾರ್ಥವನ್ನುಳಿಸುವೆ ॥ ೩ ॥

ಮೇಲೆ ನೋಡೆಂದೆನಲು ಕೃಷ್ಣನಾ ವೈರಿಕುಲ ।
ಕಾಲ ಭೀಮಜನಭಯು ಬಹುದೆಂದು ಭಯದೊಳಾ ।
ವೇಳೆಯೊಳೆ ಧರ್ಮಜನಬಳಿಸರಿದು, 'ಸಮರದೊಳ್ ಗೆಲುವುದಕೆ ನರಯಜ್ಞವ ॥
ಕಾಲಗಳೆಯುವೆ ಮಾಡಬೇಕದಕೆ ಕಾಯದೊಳ್ ।
ಮೇಲೆ ರೋಮಗಳೆದ್ದ ಕೆಂಗಣ್ಣ ಕೆವ್ಮೀಸೆ ।
ಯಾಳಾಗಬೇಕೆ'ನಲು ತಕ್ಕವನ ತರುವುದಕೆ ಧರ್ಮ ತಮ್ಮನೊಳೊರೆದನು ॥ ೪ ॥

ಭೀಮನಾಸಂಗತಿಯನೂರ್ಧ್ವಕೇಶಿಯೊಳೊರೆಯೆ ।
ಪ್ರೇಮದಿಂದಲೆ **ತಾತನಾಜ್ಞೆಯಂ ನಡೆಸುವರೆ**
ಭೂಮಿಯೆಲ್ಲಾ ತಿರುಗಿ ಸಿಕ್ಕದಿರಲೊಂದು ದಿನ ಮೊಗದೊಳೆಯುತಿರೆ ಜಲದಲಿ ॥
ಕಾಮಿಸಿದ ಲಕ್ಷಣಂಗಳ ತನ್ನೊಳೇಕಂಡು ।
ಕಾಮಜನಕನ ಕಪಟಲೀಲೆಯೆಂದರಿತೊಡಂ ।
ಸೌಮನಸ್ಯದಿ ಜನಕನಾಜ್ಞೆಯಂ ಪಾಲಿಸಲ್ ಸಿಜತನುವನೀವೆನೆಂದು ॥ ೫ ॥

ವೈರಿಗಜ ಹರಿಯೂರ್ಧ್ವಕೇಶಿಯುವ **ತನ್ನಾಶ** ।
ರೀರವಂ ಭಾರತೋದ್ಧಾರ ಯಜ್ಞಾಹುತಿಗೆ ।
ಧಾರೆಯೆರೆದೊಡೆ ಜನ್ಮಸಾರ್ಥಕವದಾಯ್ತೆಂದು ನಿಃಸ್ವಾರ್ಥಿಯಾಗಿ ಪೋಗಿ ॥
ನೀರಗುಳ್ಳೆಯ ಬಾಳಿನೋಲ್ ಕ್ಷಣಿಕವಾಗಿರುವ ।
ಧಾರಿಣಿಯ ನಶ್ವರಸುಖಂಗಳಿಗೆ ಮನಗೊಡದೆ ।
ಭಾರತಸುತಂ ದೇಶ ಮಾತೃ.ಪಿತೃಭಕ್ತಿಯಿಂ ಭೀಮನೆಡೆಗೊಲಿದು ಬಂದು ॥ ೬ ॥

ತಂದೆಯೊಳು ತಾನೆನದೆ–ತಂದಿಹೆನು ತಕ್ಕವನ ।
ನೆಂದೊರೆದು ಯಾಗಶಾಲೆಯೊಳಿಂದು ಮಲಗಿಸುವೆ ।
ನಂದದಿಂ ಬಟ್ಟೆಯಂ ಹೊದಿಸುತೆಲೆ ಜನಕನೇ! ತೆರೆದದಂ ನೋಡಬೇಡ ॥
ಎಂದು ನಡೆದಲ್ಲಿಂದ ಯಜ್ಞಶಾಲೆಯ ಬಳಿಗೆ ।
ಬಂದವಂ ತಿಳಿಯದಾ ರೀತಿಯಿಂ ವಸನವ ।
ನ್ನಂದದಿಂ ಧರಿಸುತ್ತ ಸೆರೆಮುಸುಕು ಹಾಕುತ್ತ ಮಲಗಿದಂ ಬಾಲಸಕಟಾ! ॥ ೭ ॥

"ನರನಯಾಗಕೆ ತಂದೆ, ತಂದೆ"ಯೆಂದೆಂದೊಡನೆ ।
ತರಳಸಾಹಸಿ ಕಾರ್ಯದಕ್ಷನೆನ್ನುತ ಹಿಗ್ಗಿ ।
ಬರಿಮಾತನೇ ನಂಬಿ ನೋಡದಾರದೆಂಬುದಂ ಕೂರಸಿಯ ಪಿಡಿದು ಭೀಮ ॥
ಸರಿದನಯ್ಯೋ! ಯಜ್ಞಶಾಲೆಯೊಳು ತನ್ನಣುಗ ।
ಮರೆಸಿರುವತಕ್ಕವನನೆಂದು ಭಾವಿಸಿಕೊಂಡು ।
ಕರಕರನೆ ಕಾಲಿಂದಕಂಠಪರ್ಯಂತವಾ ಖಡ್ಗದಿಂ ಕೊಚ್ಚುತಿರಲು ॥ ೮ ॥
ಅಕ್ಕಟಾ! ಬಾಲಕಂ ಹೇಳಿದಂ "ತಂದೆಯೇ ।
ಮಿಕ್ಕುಳಿದ ಕಣ್ಣೆಡೆಯ ಕಡಿಯದಿರು, ಕೌರವರ ।
ಸೊಕ್ಕಮುರಿದಿಕ್ಕುವುದನೀಕ್ಷಿಸಲು ಬಿಟ್ಟುಬಿಡು ದಯದೊಳದ"ನೆಂದೊರೆಯಲು ॥
ದಿಕ್ಕುದೋರದೆ ಭೀಮ ರುದ್ರಾವತಾರದಿಂ ।
ರಕ್ಕಸಾರಿಯ ಜರೆದು ಪುತ್ರಶೋಕಾಗ್ನಿಯಂ ।
ಲೆಕ್ಕಿಸದೆ ತನ್ನ ಸುತನಾತ್ಮಯಜ್ಞಕ್ಕಾಗಿ ಮನದೆ ಸಂತಸಗೊಂಡನು ॥ ೯ ॥
ಎದ್ದೇಳಿ ಭಾರತೀಯರೆ! ರಾಷ್ಟ್ರಸೇವೆಯೊಳ್ ।
ಬದ್ಧಕಂಕಣರಾಗಿ! ಬಿದ್ದಿರುವ ಭಾರತಿಯ ।
ನುದ್ಧರಿಪ ಯುದ್ಧದೊಳಗಾತ್ಮಯಜ್ಞಕ್ಕಾದರೂ ಸಿದ್ಧರಾಗಿ ಪೋಗಿ ॥
ಊರ್ಧ್ವಕೇಶಿಯು ಭಾರತೀಯನಲ್ಲವೆ? ಅವನೊ ।
ಳಿರ್ದರಕ್ತವು ನಿಮ್ಮೊಳಿಲ್ಲವೇ? ಬಾಂಧವರೆ! ।
ಎದ್ದೇಳಿರೆದ್ದೇಳಿ! ಭಾರತಾಂಬೆಯ ಭರದೊಳುದ್ಧರಿಸಿ ವೀರಪಿಸಿಸಿ ॥ ೧೦ ॥

"ಸತ್ಯಾಗ್ರಹಿ"

ಅಭಿನವಾಭಿಮನ್ಯು ಭಗತ್ಸಿಂಗ

(ಗಲ್ಲಿಗೇರಿಸಿದ್ದು–೨೩–೩–೧೯೩೧.)

(ಲಾವಣಿ)

ಧಗಿಧಗಿಸುತ್ತಿದೆ! ಭಾರತ ಹೃದಯದೆ । ದುಃಖಾನಲ ಪ್ರಜ್ವಲಿಸುತಿದೆ! ॥
ಭಗತಸಿಂಗ, ಶುಕದೇವ, ರಾಜಗುರು । ಯೋಧರವರ ನಿಧನಗಳಿಂದೆ ॥ ೧ ॥
ಭರಣಿಕೃತ್ತಿಕಾಕಾಲ ಸಂಧಿಯಲಿ । ಪರಜನರಿವರನು ವಧಿಸಿದರು! ॥
ಧರಣಿಯ ತಳಮಳಗೊಳಿಸುವ ಕಾರ್ಯವ । **ನಧಿಕಾರ**ಗಳಿಂದೆಸಗಿದರು! ॥ ೨ ॥

ಪರಹೃದಯಂಗಳ ತಲ್ಲಣಗೊಳಿಸಿದ । ಸ್ವಜನ ಮನಂಗಳ ಬೆಳಗಿಸಿದ ॥
ನರಕೇಸರಿಗಳನರಿಗಳು ಕೊಂದರು! । ಪ್ರಾಣವ ತೆಗೆದರು ಛಲದಿಂದ ॥ ೩ ॥
ಅಖಂಡ ಬ್ರಹ್ಮಾಂಡವೆ ಖಂಡಿಸುತಿದೆ । ಭರತಖಂಡವಿದಿರಾಡುತಿದೆ! ॥
ಅಕಟಾ! ಕೇಳುವರಿಲ್ಲೆಂದೆನುತಿದೆ! । ಪರಜನರಾಟವ ದೂರುತಿದೆ! ॥ ೪ ॥
ರಾಷ್ಟ್ರೋದ್ಧಾರದ ಯಜ್ಞಕುಂಡಲಿ । ರುಂಡಂಗಳನರ್ಪಿಸಿದವರು ॥
ರಾಷ್ಟ್ರಮುಖಂಡರು ನರಮಾರ್ತಾಂಡರು । ಪ್ರಚಂಡ ಭಾರತಹಿತಸುತರು ॥ ೫ ॥
ಭೂಗರ್ಭವ ಭೇದಿಸಿ ಜ್ವಾಲಾಮುಖಿ । ನಭೋಮಂಡಲಕೆ ಸಿಡಿವಂತೆ ॥
ತ್ಯಾಗವೀರ ಧುರಧೀರರು ಪೋದರು! । ಸಂದರು! ವಡಬಾನಲನಂತೆ! ॥ ೬ ॥
ಉಜ್ವಲ ರಾಷ್ಟ್ರ ಪ್ರೇಮದೆ ಸ್ವರಾಜ್ಯ । ರಣಕಣದೊಳು ಮಡಿದವರಿವರು ॥
ನಿರ್ಜರ ದೇಹವ ಪಡೆದರು! ನಡೆದರು! । ವೀರಸ್ವರ್ಗದಲಿ ನಲಿಯುವರು! ॥ ೭ ॥
ಜಗದೊಳಿವರು ಜಡದೇಹವನುಳಿದರು । ಕೀರ್ತಿಕಾಯವನು ತಾಳಿದರು ॥
ಜಗತ್ಪ್ರಸಿದ್ಧರು **ಭಗತ್‌ಸಿಂಗ, ಶುಕ** । **ದೇವ, ರಾಜಗುರು** ಬಾಂಧವರು ॥ ೮ ॥
ಯೋಧರಿವರ ವಿಮಲಾತ್ಮಶಕ್ತಿಯದು । ಭಾರತಭುವಿಯಲಿ ಬೆಳಗಿರಲಿ! ॥
ಶ್ರೀಧವನೊಲಿದೀ ಬಂಧುಗಳಾತ್ಮಕೆ । ಪರಮಶಾಂತಿಯನು ಕರುಣಿಸಲಿ! ॥ ೯ ॥

[~~‘ನವಯುಗ’ ೨೬-೩-~~೧೯೩೧.]

ಖಾದಿಯ ಹಾಡು

ಧಾಟಿ:–(ಕಡು–ಧೀರನೆ ಶೂರನೆ)

ಪರ-ದೇಶದ ಬಟ್ಟೆಯ ಬಿಡು ಬಿಡು । ಸುಡು ಸುಡು ॥ ದೇಶಬಂಧು ॥ ಪ. ॥

ಸ್ವರ್ಣಧರಣಿಯಾ ಸ್ವರ್ಣವನೆಲ್ಲವ ।
ಪೂರ್ಣವಿದೇಶೀ ವಸ್ತ್ರಕೆ ಕೊಡುವ ।
ಕರ್ಣಕಠೋರವಿಚಾರವ ಸುಡು ಸುಡು ॥ ದೇಶಬಂಧು ॥ ೧ ॥
ಪರದೇಶಿಗಳಾವಸನಕ್ಕೀಯುವ ।
ಭರತಖಂಡದಾ ಜೀವನಧನವ ।
ಪರಮಸ್ವದೇಶೀ ಖಾದಿಗೆ ಕೊಡು ಕೊಡು ॥ ದೇಶಬಂಧು ॥ ೨ ॥

ಸಾವಿರಗಟ್ಟಲೆಯಲಿ ಭಾರತದಲಿ ।
ಸಾವರು ಕೂಳಿಲ್ಲದೆ ಹಸಿವಿಂದಲಿ ।
ಜೀವನ ಮಾರ್ಗದ ಬಟ್ಟೆಯು ಕೊಡು ಕೊಡು ॥ ದೇಶಬಂಧು ॥ ೩ ॥
ಮಾನಿನಿಯರು ಹಲವರು ಬತ್ತಲೆಯಲಿ ।
ಕಾನನದೊಳಗಿರುವರು ಹಲವೆಡೆಯಲಿ ।
ಮಾನದ ಹಾದಿಯ ಖಾದಿಯ ಕೊಡು ಕೊಡು ॥ ದೇಶಬಂಧು ॥ ೪ ॥
ಚರಕವತಿರುಗಿಸಿ, ಬಟ್ಟೆಯನೊದಗಿಸಿ ।
ಪರದೇಶೀವ್ಯಾಪಾರವ ನಿಲ್ಲಿಸಿ ।
ಧರೆಗೆ ಸ್ವರಾಜ್ಯದ ಬಟ್ಟೆಯ ಕೊಡು ಕೊಡು ॥ ದೇಶಬಂಧು ॥ ೫ ॥
ಭಾರತಸ್ವಾತಂತ್ರ್ಯಾಂಬರ ಮಿತ್ರನು ।
ಧೀರ ಮಹಾತ್ಮನು ಸಾರುವ ನುಡಿಯನು ।
ದೂರದೆ ಮನ್ನಿಸಿ ಖಾದಿಯ ಕೊಡು ತೊಡು ॥ ದೇಶಬಂಧು ॥ ೬ ॥

~~[ರಾಷ್ಟ್ರಬಂಧು ೧೭-೪-೨೧; ನವಯುಗ ೧೬-೪-೨೧; ತಾಯಿನಾಡು~~ [೨೦-೪-೨೧.]

ಮಂಗಳೂರಿನಲ್ಲಿ

ದೇಶಪ್ರಿಯ ಸೇನಗುಪ್ತರ

ಅಧ್ಯಕ್ಷತೆಯಲ್ಲಿ ಜರಗಿದ

ದಕ್ಷಿಣ ಕನ್ನಡ ಜಿಲ್ಲಾ ಪರಿಷತ್ತಿನ ಷಷ್ಠಾಧಿವೇಶನದ

ಸ್ವಾಗತಗೀತೆ

(೬-೫-೧೯೨೧.)

ಧಾಟಿ:-(ಭಾರತೀಯರು-ನಾವು-ಭಾರತೀಯರು)

ಸ್ವಾಗತಂ

ಪೂರ್ಣ ಸ್ವಾಗತಂ-ಪ್ರೇಮ-ಪೂರ್ಣ-ಸ್ವಾಗತಂ ॥ ಪಲ್ಲ ॥
ರಾಷ್ಟ್ರಸಭಾಧ್ಯಕ್ಷವಿನುತ । ರಾಷ್ಟ್ರಹಿತಾಸಕ್ತಚರಿತ ।
ಶ್ರೇಷ್ಠ ಭಾರತರಾಷ್ಟ್ರಭಕ್ತ । "**ರಾಷ್ಟ್ರವೀರ ಸೇನಗುಪ್ತ.** ॥ ೧ ॥

ವಂಗವ್ಯಾಘ್ರಗಮುವ ತಿಳಿದು । ತುಂಗ ಸಭಾರಂಗಕಿಳಿದು ।
ಮಂಗಲಾಪುರವರದೊಳಿಂದು । ಕಂಗೊಳಿಸುವ ಬಂಧುಗಳಿಗೆ– ॥ ೨ ॥

ಪಾರತಂತ್ರ್ಯ ಪಾಶದಿಂದ । ಭಾರತಿಯನು ಬಿಡಿಸೆ ಬಂದ ।
ವೀರ ಭ್ರಾತೃಭಗಿನಿಯರಿಗೆ । ಧೀರ ಲೋಕಮಾನ್ಯರಿಗೆ– ॥ ೩ ॥

ದೇಶಸೇವೆಗಾಗಿ ಸಕಲ । ಕ್ಲೇಶಗಳನು ಸಹಿಸಿದಮಲ ।
ದೇಶಮಾತೆಯ ಮಕ್ಕಳಿಗೆ । ದೇಶಬಂಧುಗಳಿಗೆ–ನಿಮಗೆ– ॥ ೪ ॥

ಭ್ರಾಜಮಾನ ಖಾದಿಯಿಂದ । ರಾಜಿಪಾತ್ಮತೇಜದಿಂದ ।
ರಾಜಹಂಸರಂತೆ ಬಂದ । ಪೂಜ್ಯವರ ಮಹಾತ್ಮರಿಗೆ– ॥ ೫ ॥

ಅಭಯವರದನೊಲ್ಮೆಯಿಂದ । ವಿಬುಧ ತಿಲಕ ಪಂಥದಿಂದ ।
ಶುಭ ಸ್ವರಾಜ್ಯಧುರದ ಯೋಧ । ವಿಭವದಿಂದ ಬಂದ–ನಿಮಗೆ– ॥ ೬ ॥

ವೀರವಿಯೋಗ

(ಸೇನಗುಪ್ತನ ನಿಧನ: ೨೩–೭–೧೯೩೩.)

ಭಾರತೀ ಸ್ವಾತಂತ್ರ್ಯಸಂಗರ ।
ಶೂರ! ನಿಸ್ಸಹಕಾರವರಧುರ ।
ಧೀರ! ಭಾರತ **ಚಿತ್ತರಂಜನ** ಬಲದ ರಣವೀರ ॥
ವೈರಿಭೀಕರ ವಂಗವ್ಯಾಘ್ರನು! ।
ಭೂರಿವಿಭವಾನ್ವಿತನು ಸ್ಪಂದನು! ।
ಸೇರಿಹೋದನು! **ಸೇನಗುಪ್ತ**ನು! ವೀರಸ್ವರ್ಗವನು! ॥ ೧ ॥

'**ದೇಶಬಂಧು**'ವಿನೊಡನೆ ನಡೆದು, ವಿ ।
ಶೇಷಯಶವನು ಪಡೆದು, ಭಾರತ ।
ವಾಸಿಗಳ ಸೇನಾನಿ **ಗಾಂಧಿ** ಪ್ರಬಲ ಭಟನಾಗಿ ॥
ದೇಶಮಾತೆಯ ಸೇವೆಯಲಿ ತ ।
ನ್ನಾ ಶರೀರವ ಸವೆಸಿದಾ ನಿಜ ।
ದೇಶಭಕ್ತನು ತ್ಯಜಿಸಿದನು ಜಡದೇಹಬಂಧವನು ॥ ೨ ॥

ಮುಂದರಿಸಿ ತಾವಿಟ್ಟ ಪದವನು ।
ಹಿಂದಕೆಳೆಯಲು ರಾಷ್ಟ್ರಸಭೆಯುವ ।
ರಿಂದು ಚಿಂತಿಸುವುದನು ತಿಳಿವಿಗೆ ತಂದು ಮನನೊಂದು ॥
ಹಿಂದೆಗೆವ '**ಕೃತಿ**'ಯಿಂದ '**ಮೃತಿ**' ಲೇ ।
ಸೆಂದು ಬಗೆದನೊ ತಾನೆನಲು ಜವ ।
ದಿಂದ ಪಿಡಿದನು ಕರ್ಮವೀರನು ಧೀರಪಂಥವನು! ॥ ೩ ॥

ಕ್ರೂರದುಶ್ಶಾಸನ ವಿನಾಶ ಗ ।
ಭೀರ ಭಾರತ ಭೀಮ ವೈಭವ ।
ಭಾರತೀ ಪ್ರಿಯ ವಿಜಯ ನಿರ್ಭಯಕಾಯ ಕೀರ್ತಿಮಯ ॥
ಸೇರಿದನು ಕೈಲಾಸವನು! ಹಾ! ।
ಹಾರಿದನು ಸಾಯುಜ್ಯಕಾತನು! ।
ಸಾರಿದನು ಸ್ವಾರಾಜ್ಯವನು! ಸ್ವಾತಂತ್ರ್ಯ ನಿಲಯವನು! ॥ ೪ ॥

ವೀರನಾ ರಾಷ್ಟ್ರಾಭಿಮಾನವು ।
ಭಾರತೀಯರ ಹೃದಯದಲಿ ವಿ ।
ಸ್ತಾರವಾಗಿರುತಿರಲಿ! ಸುಮನೋಭೀಷ್ಟ ಸಿದ್ಧಿಸಲಿ! ॥
ಧೀರಬಂಧು ವಿಯೋಗದುಃಖವ ।
ಸೈರಿಸಲು ಭಾರತಕೆ ಶಕ್ತಿಯ ।
ಶ್ರೀರಮಣ ಕರುಣಿಸಲಿ ಸುಭಟನಿಗಾತ್ಮಶಾಂತಿಯನು! ॥ ೫ ॥

[~~ನವಯುಗ ೨೭-~~[೨೬-೭-೩೩]

ವೀರಸ್ವರ್ಗಾರೋಹಣ

(ನಿಧನ: ೨೩-೭-೧೯೩೩)

'**ರಾಷ್ಟ್ರವೀರ**' **ಜತೀಂದ್ರ ಮೋಹನ** । **ಸೇನಗುಪ್ತ**ನು–ಪೋದನೇ! ॥
ರಾಷ್ಟ್ರಕಾರ್ಯ ಧುರಂಧರನು ಸುರ । ಲೋಕಯಾತ್ರಿಕನಾದನೇ! ॥ ೧ ॥

ರಾಷ್ಟ್ರಸಭೆಯಧ್ಯಕ್ಷ '**ಭಾರತ** । **ದಾನೆ**'ಯನು ಹಿಂಬಾಲಿಸಿ– ॥
ರಾಷ್ಟ್ರಯೋಧರು ಮುಂದಗತಿಯಲಿ । ನಡೆವ ಪಥವನು ಚಿಂತಿಸಿ– ॥ ೨ ॥

ಭಾರತೋದ್ಧಾರಕರ ಹಿರಿಯರ । ನೋಡಲಾ ಗತಯೋಧರ– ॥
ಸೇರಿ ಮುಂದಿನ ದಾರಿಯನು ಸರಿ । ಯರಿತು ಬರಲಾ ವಿಬುಧರ– ॥ ೩ ॥

ಧೀರ **ದಾದಾಭಾಯಿ–ಗೋಖಲೆ**– । **ತಿಲಕ–ಲಾಲಾ–ದಾಸ**ರ– ।
ಶೂರ **ಮೋತೀಲಾಲ–ಶ್ರದ್ಧಾ** । **ನಂದ–ಮಹಮದ** ಮುಖ್ಯರ– ॥ ೪ ॥

ದರ್ಶನಾತುರನಾಗಿ ಹೊರಟನೆ! । ವೀರಸ್ವರ್ಗಕೆ ಪೋದನೇ! ।
ದರ್ಶನಾತುರರಾದ ಬಂಧುಗ । ಳವರ ಕರೆಗನುವಾದನೇ! ॥ ೫ ॥

ಅನಭಿಷಿಕ್ತ '**ನರೇಂದ್ರ**'ನಂತೆ ವಿ । ರಾಜಿಸಿದ ವಂಗೇಂದ್ರನ– ।
ಅನಿಮಿಷೇಂದ್ರನು ಬಯಸಿದನೆ ಸುಕು । ಮಾರ '**ಭಾರತವೀರ**'ನ– ॥ ೬ ॥

ಚಿತ್ತರಂಜನ ದಾಸನಾ–**ತ್ರೈ** । **ಮುಕುಟಧರ**–ನರನಳಿದನೇ! ।
ನಿತ್ಯಕೀರ್ತಿಯ ತನುವ ಧರಿಸುತ । ನಿತ್ಯದೇಹವನುಳಿದನೇ! ॥ ೭ ॥

'**ಜಾತ ಮೋಹನದಾಸ**' ಪುತ್ರನು– । **ಗಾಂಧಿಹಿತ**–ಶುಭಗಾತ್ರನು! ।
'**ಛತ್ರಪತಿ**'ಯಂತೆಸೆದು ನಡೆದ **ಸು** । **ಭಾಸಚಂದ್ರ**ನ ಮಿತ್ರನು! ॥ ೮ ॥

'ಎಲ್ಲಿ ನಿಜಪತಿ '**ನೆಲ್ಲಿ**'ಯಾಶ್ರಯ । ನೆಲ್ಲಿ '**ಶಿಶಿರ**'ನ ಜನಕನು? ।।।
ಎಲ್ಲಿ ಜನನೀ ಭಾರತೀಪ್ರಿಯ । **ನೆಲ್ಲಿ–ಗುಪ್ತ**ಕುಮಾರನು? ॥ ೯ ॥

ಎಲ್ಲಿ '**ಗುಪ್ತ**'ನ '**ಪ್ರಕಟ**'ವಾಕ್ಯಗ । ಳೆಲ್ಲಿಯಾಪ್ತನ ಬೋಧನೆ? ।
ಎಲ್ಲಿ ಪಂಚತ್ವವನು ಹೊಂದಿದ । ಸುಭಟನಾ ಹಟಸಾಧನೆ? ॥ ೧೦ ॥

ಎಲ್ಲಿರಲಿ ತನ್ನಾತ್ಮಶಕ್ತಿಯ । ಚೆಲ್ಲಿ ಚಿನ್ಮಯನಾದನೆ? ।
'**ನೆಲ್ಲಿ**'ಯರಸನು ಶ್ರೀಜಗನ್ಮಯ । ನಲ್ಲಿ ತನ್ಮಯನಾದನೇ? ॥ ೧೧ ॥

ನಾಕಲೋಕದೊಳೆಸೆವ ವಂಗದ । ವ್ಯಾಘ್ರನಾ–**ಘನ**–ಗರ್ಜನೆ– ।
ಲೋಕಜಾಗೃತಿಗೊಸಸಿ ಬೆಳಗಲಿ! । **ಗುಪ್ತನಾತ್ಮಸಮರ್ಪಣೆ!** ॥ ೧೨ ॥

[~~ಕಂಠೀರವ ೮–೮–~~ ೧೯೩೩]



ಭಾರತಬಂಧು ಮಾಲವೀಯ

ಜನನ 5–12–1861] (ಧಾಟಿ: ಕಾಣವೇ ನಿನ್ನಯ ಗುಣ) [ನಿಧನ 12–11–'46

(ರಾಗ ಸುರುಟಿ — ಅಟತಾಳ)

ಜಯತು '**ಭಾರತ ಬಂಧು** । ಪ್ರಿಯ **ಮಾಲವೀಯ** ॥ ಪ. ॥
ಜಯತು '**ಕಾಶೀವಿದ್ಯಾ** । **ಲಯ**'ದ ಸುವಿಜಯ ॥ ಅ. ಪ. ॥

'**ಹಿಂದೂ ಮಹಾಸಭೆ**' । ಗಧ್ಯಕ್ಷನಾಗಿ ।
ನಿಂದು 'ಸನಾತನ । ಧರ್ಮ'ವ ಬೆಳಗಿ ॥
ಹಿಂದೂದೇಶದ '**ರಾಷ್ಟ್ರ** । **ಪತಿ**'ಯ ಪೀಠದಲಿ ।
ಸಂದ 'ಭಾರತ ಬಂಧು' । ಕೀರ್ತಿಯೊಳಿರಲಿ ॥ ೧ ॥

ಸರ್ವ ಹಿಂದುಗಳು ಸ್ವ । ಧರ್ಮ ರಕ್ಷಣೆಗೆ ।
ಸರ್ವಸ್ವವನ್ನರ್ಪಿ । ಸಲು ಸಿದ್ಧರಾಗೆ ॥
ಗರ್ವಿಷ್ಠರಾದ ವಿ । ರೋಧ ಪಕ್ಷಗಳ ।
ಸರ್ವನಾಶವು ಸಿದ್ಧ । ವೆನುವ ಸುಪ್ರಬಲ ॥ ೨ ॥

ಹಿಂದೂ ಧರ್ಮಾಭಿ ಮಾ । ನದ ಘನತೆಯೊಳು ।
ಹಿಂದೂ ದೇಶಾಭಿ ವೃ । ದ್ಧಿಯನು ಸಾಧಿಸಲು ॥
ಖಂಡಿತ ಸ್ವಾತಂತ್ರ್ಯ । ವೆನುವ ಭಾವನೆಯ ।
ಪಂಡಿತ ಮದನಮೋ । **ಹನ ಮಾಲವೀಯ** ॥ ೩ ॥

'**ದಶರಥ – ಮೋತಿಲಾ** । **ಲ'ನು! 'ಜವಹರನು** – ।
ವಸುಧೆಯ **ರಾಮನು**' । **ಗಾಂಧಿ – ಗಾಧಿಜನು!** ॥
ಎಸೆವರೆಂದೆನೆ–'**ಮಾಲ** । **ವೀಯನು** ತಾನು ।
ಜಸದ **ವಸಿಷ್ಠ**ನಾ । ಗಿರನೆ! ಮತ್ತೇನು? ॥ ೪ ॥

ಭಾರತ ಮಾತೆಯ । ಘೋರ ಸಂಕಟವ ।
ದೂರಮಾಡಲು ಮುಂದೆ । ಬಂದು ಶೋಭಿಸುವ ॥
ಧೀರ '**ಮಹಾತ್ಮ**'ನ । ಬಲಗೈಯಂತಿರುವ ।
ಭಾರತವೀರನ । **ಪೊರೆಯಲಿ** ದೇವ! ॥ ೫ ॥

———

[೧೯೪೬]



ಲೋಕಮಾನ್ಯ
ಬಾಲಗಂಗಾಧರ
ತಿಲಕ

ಜನನ: 23–7–1856
ನಿಧನ: 31–7–1920

ಪಂಡಿತ
ಮದನಮೋಹನ
ಮಾಲವೀಯ

ಜನನ: 5–2–1861
ನಿಧನ: 12–11–1946





ದೇಶಬಂಧು
ಚಿತ್ತರಂಜನದಾಸ

ಜನನ: 5-11-1870
ನಿಧನ: 16-6-1925



ನೇತಾಜಿ
ಸುಭಾಸಚಂದ್ರ ಭೋಸ

ಜನನ: 23-1-1897
ಅಂತರ್ಧಾನ? 18-8-1945

ವಿಠಲವಿಯೋಗಂ

ನಿಧನ ೨೦–೧೦–೧೯೩೩

(ಕಂದ)

ಶ್ರೀಮದ್ಭಾರತ **ಸರ್ವ** ।
ಗ್ರಾಮಾಧಿಪನಂತೆ ಮೆರೆದ ಹಿರಿಯ **ಪಟೇಲಂ** ॥
ಪ್ರೇಮಮಯ **ಶ್ರೀ ವಿಠಲಂ** ಸ ।
ನಾಮಂ ಸುರಲೋಕಪದವಿಯಂ ಬಯಸಿದನೇ! ॥ ೧ ॥

ನ್ಯಾಯಸಭಾಧ್ಯಕ್ಷಯಶ ।
ಶ್ರೀಯರಸಂ ರಾಜಪದವಿಯದನುಳಿಯುತ್ತಂ ॥
ರಾಯನ ಬಂಧವ ಖಂಡಿಸಿ ।
ಸಾಯುಜ್ಯಾಸ್ಥಾನಪದವ ಬಗೆದನೆ ಶಿವನೇ! ॥ ೨ ॥

ಆ **ನೆಹರು-ಲಾಲ** ಮುಖ್ಯ ಸ ।
ಭಾನಾಯಕನಾಗಿ ನಲಿದ ರಾಷ್ಟ್ರಾಧ್ಯಕ್ಷಂ ॥
ಮಾನವ **ತಿಲಕ**ರ ನೋಡಲ್ ।
ತಾನೇ ಸುರಪುರದ ಯಾತ್ರೆಯಂ ಬಯಸಿದನೇ! ॥ ೩ ॥

ವೀರಶ್ರೀ ವಲ್ಲಭ-**ಸರ** ।
ದಾರ ಶ್ರೀವಲ್ಲಭಾಗ್ರಜಂ ನಿಜವೆನುತಂ ॥
ಧಾರಿಣಿಯೊಳ್ ಜಸವಡೆದಾ ।
ಭಾರತ ಜನನೀ **ಕುಮಾರ ವಿಠಲ**ನೆ ಧನ್ಯಂ ॥ ೪ ॥

ಭಾರತಭೀಷ್ಮಂ ರಾಷ್ಟ್ರ ವಿ ।
ಚಾರಂಗಳನರ್ಜುನಾದಿಗಳಿಗೊರೆಯುತ್ತಂ ॥
ಸಾರಿದ ತೆರದೊಳ್ ವಿಠಲಂ ।
ಶೂರ **ಸುಭಾಸಾ**ದ್ಯರೊಡನೆ ನುಡಿದಂ ನಡೆದಂ ॥ ೫ ॥

ಆ **ದೇಶಬಂಧು** ಸಿಂಹ ನಿ ।
ನಾದಂ **ಹಿಂದೀಸ್ವರಾಜ್ಯ** ಭಟರೊಳಗನಿಶಂ ॥

ಆದರದಿಂ ಪೊಳಗಲಿ! ಗತ! ।
ಯೋಧಾಶೀರ್ವಾದವಿಳೆಗೆ ಲಭಿಸಲಿ ಸತತಂ ॥ ೬ ॥

(ಸ್ವದೇಶಾಭಿಮಾನಿ: ೧೦–೧೧–೧೯೩೩. ಕಂಠೀರವ: ೩೧–೧೦-೧೯೩೩.
ಪ್ರಜಾಮತ: ೫–೧೧–೧೯೩೩. ತೊದಲ್ನುಡಿ: ೫–೧೧–೧೯೩೩.
ಸರಸ್ವತಿ, ಸುಬೋಧ: ೧೯೩೩)

[೧೯೩೩]

ಹರಿಜನ ಸಂಧಾನ

ಸ್ಪರ್ಶನ

(ದಾಟಿ: ಹೊಲೆಯು ಹೊರಗಿಹನೆ?)

I

ನಮ್ಮನೇತಕೆ ದೂರ-ದೂರ ನಿಲಿಸುವಿರಿ? ॥ ಪ ॥
ನಿಮ್ಮಂತೆ ನಾವು ಹಿಂದುಗಳು ಭಾವಿಸಿರಿ! ॥ ಅ. ಪ ॥

ವಿಶ್ವಾತ್ಮನಾದ ಪರಮಾತ್ಮನೀ ಸೃಷ್ಟಿಯಲಿ ।
ವಿಶ್ವಜೀವಿಗಳೊಳಗೆ ಭೇದಕೆಡೆಯೆಲ್ಲಿ? ॥
ವಿಶ್ವಬಂಧುಗಳೆಲ್ಲರೊಂದೆಂಬ ಮತದಲ್ಲಿ ।
ವಿಶ್ವಭಾರತದಲ್ಲಿ ನಮಗೆ ನೆಲೆಯಿರಲಿ! ॥ ೧ ॥

ಸರ್ವಮಾನವರಂತೆ ಮಾನವರು ಹರಿಜನರು ।
ಸರ್ವಾಂಗದೊಳಗೆ ಭಾರತರಕ್ತಮಯರು ॥
ಸರ್ವೇಶನಿದಿರಿನಲಿ ಸರ್ವರಂತಿರುವರು ।
ಸರ್ವವಿಧದಲ್ಲಿ ಹಿಂದುಗಳು ನಮ್ಮವರು ॥ ೨ ॥

ಪಂಚಭೂತಗಳಿಂದ ಕೂಡಿರುವ ಕಾಯದಲಿ ।
ಪಂಚೇಂದ್ರಿಯಂಗಳಿಂದೆಸೆದು ರೂಢಿಯಲಿ ॥
ಪಂಚತ್ವವನು ಮಿಕ್ಕ ಜನರಂತೆ ಪಡೆವವರು ।
ಪಂಚಮರು–ನಿಮ್ಮವರು ನಾವು–ಹರಿಜನರು ॥ ೩ ॥

ನೋಡಿದಾ ನಿಮ್ಮ ನಯನಂಗಳಿಗೆ ಹೊಲೆಯುಂಟೆ? ।
ಹಾಡಕೇಳಿದ ಕರ್ಣಗಳಿಗೆ ಹೊಲೆಯುಂಟೇ ॥

ಆಡಿದಾ ನಾಲಿಗೆಗೆ ಹೊಲೆಯುಂಟೆ? ಮೈಗಾಳಿ ।
ತೀಡಿದಾ ನಾಸಿಕಕೆ ಹೊಲೆಯುಂಟೆ? ಪೇಳಿ! ॥ ೪ ॥

ನೋಡಲೀ ಪಂಚೇಂದ್ರಿಯಂಗಳಲಿ ನಾಲ್ಕರಲಿ ।
ಕೂಡಿವರೆ ಹೊಲೆಯಿಲ್ಲ–ನಿಮ್ಮ ಚಿತ್ತದಲಿ ॥
ನಾಡಿನಲಿ ನಮ್ಮನ್ನು ಮುಟ್ಟಿದಾ ಮಾತ್ರದಲಿ ।
ನಾಡಿಯಲಿ ಹೊಲೆಯಹುದೆ? ಬಲ್ಲವರು ಪೇಳಿ! ॥ ೫ ॥

II

ಹರಿವಹೊಳೆಯನು ನಾವು ಮುಟ್ಟಿರಲು ಮುಳುಗುವಿರಿ ।
ಹರಿಜನರು ಕಬ್ಬುಗಳ ಕೊಡಲು ಕೊಳ್ಳುವಿರಿ ॥
ಹರಕೆಗೆಳನೀರು ಮಧುಗಳ ತರಲು ಪಡೆಯುವಿರಿ ।
ಹರಿಹರರಿಗಭಿಷೇಕ ಮಾಡಿ ಕುಡಿಯುವಿರಿ ॥ ೬ ॥

ಮುಟ್ಟಲಾಗದ ಜನರು ಹಿಂಗಾರಕೇದಿಗೆಯ ।
ಕಷ್ಟದಿಂ ತರಲು ದೇವರಿಗಿಡುವಿರಯ್ಯಾ ॥
ಕಷ್ಟವಿಲ್ಲದೆ ಕೊಯ್ಯಲೆಟಕುವಾ ಕುಸುಮಗಳ ।
ನಿಷ್ಟದಿಂಕೊಡಲವುಗಳನು ಬಿಡುವಿರಲ್ಲಾ! ॥ ೭ ॥

ಲೋಕಪಾವನೆಯಾದ ಗೋವಿನಾ ಕ್ಷೀರವನು ।
ಜೋಕೆಯಲ್ಲಿ ನಮ್ಮವರು ತರಲು ನೀವದನು ॥
ಸ್ವೀಕರಿಸದಿದ್ದರೂ ನಾವು ಕೊಡುವಾ ಮಧುವ ।
ಸ್ವೀಕರಿಸುವಾ ನಿಮ್ಮ ಮತವೇನು ದೇವಾ? ॥ ೮ ॥

ನಿಮ್ಮವರು ಹೊಯ್ಲಿನಲಿ ಸಿಕ್ಕಿ ಸಂಕಟಪಡಲು ।
ನಮ್ಮವರು ಹಾರಿ ಬದುಕಿಸುವರೆಂದಿರಲು ॥
ನಮ್ಮ ಹಸುಗೂಸುಗಳು ಬಾವಿಯಲಿ ಬಿದ್ದರೂ ।
ನಿಮ್ಮವರು ಕೆಳಗಿಳಿದು ಮುಟ್ಟಲಂಜುವರು! ॥ ೯ ॥

ನಿಮ್ಮ ಮನೆಗಳಿಗಗ್ನಿ ಭಯಗಳಾದರೆ ನೀವು ।
ಜನ್ಮ ಚಂಡಾಲರನು ಹೊಗಿಸುವುದು ದಿಟವು ॥

ನಮ್ಮ ಗುಡಿಸಲುಗಳೇನಾದರೂ ಬರುವಿರೇ?
ಧರ್ಮಾತ್ಮರೇ! ನೀತಿಧರ್ಮ ಬೋಧಕರೇ! ॥ ೧೦ ॥

ಪಟ್ಟಣಗಳಲ್ಲಿ ಪಾದಾಚಾರವೆನ್ನುವಿರಿ ।
ಭ್ರಷ್ಟರಾಗದೆ ಧೂಮಶಕಟವೇರುವಿರಿ– ॥
ಕಷ್ಟ ಬರಲನುಕೂಲಶಾಸ್ತ್ರವನು ಬಿಚ್ಚುವಿರಿ– ।
ಕಟ್ಟಳೆಯದೆಂದು ಹಾರುವರೆ! ಸಾರುವಿರಿ! ॥ ೧೦ ॥

ಅನ್ಯಮತಗಳಿಗಿಳಿದು ಗೋಮಾಂಸವನು ತಿಂದು ।
ಅನ್ಯಭಾವದ ಕೆಲರು ನಮ್ಮವರು ಬಂದು ॥
ಪುಣ್ಯಾತ್ಮರೇ! ನಿಮ್ಮ ಮನೆಯ ಹೊಕ್ಕರೆ ನೀವು ।
ಪುಣ್ಯಪದರವರ ಕುಳ್ಳಿರಿಸುವುದು ನಿಜವು ॥ ೧೨ ॥

ನಮ್ಮೆಂಜಲನ್ನುಂಡ ನಾಯಿ ಬೆಕ್ಕುಗಳೆಲ್ಲ ।
ನಿಮ್ಮ ಮನೆಯೊಳ ಹೊಕ್ಕು ತಿಂದರೇನಿಲ್ಲ! ॥
ನಿಮ್ಮಂತೆ ನರಜನ್ಮದಿಂದಿರುವ ನಾವೆಲ್ಲ ।
ನಿಮ್ಮಿಂದ ದೂರ ನಿಲಬೇಕೆನುವಿರಲ್ಲಾ! ॥ ೧೩ ॥

III

ಇಳೆಯ ಜೀವದನ್ನ ಕೊಡುವ ಕೆಲಸಕ್ಕಾಗಿ ।
ಹೊಲದ ಬಳಿಯಲಿ ಗುಡಿಯನೆಸಗಿ ಧರೆಗಾಗಿ ॥
ಬೆಳೆಗಳನು ಬೆಳೆಸಿ ಕೊಟ್ಟುದನು ತಿನ್ನುವ ಜನರೆ! ।
‘ಹೊಲೆಯ’ರೆಂದೆಮ್ಮನ್ನು ದೂರ ನಿಲಿಸುವಿರೇ? ॥ ೧೪ ॥

ಮಕ್ಕಳಶುಚಿಯನೊಗೆದು ಶುಚಿಗೈವ ಜನನಿಯನು ।
ಮಕ್ಕಳೇ ದೂರ ನಿಲಿಸಿದರೆ ಗತಿಯೇನು? ॥
ಸೊಕ್ಕಿದಂಥವರೊಡನೆ ನಾವಸಹಕಾರವನು ।
ಧಿಕ್ಕನೆಸಗಿದರೆ ‘ಮುಷ್ಕರ’ದ ಫಲವೇನು? ॥ ೧೫ ॥

ಲೋಕಜೀವನಳಾಗಿ ನಿರ್ಮಲೋದಕದಿಂದ ।
ಲೋಕದ ಶುಚಿಯ ತೊಳೆದು ಜನಸೇವೆಗೈದ ॥

ಲೋಕಮಾನ್ಯತರಂಗೆ ಶಿವನಿಗಾದಳು ಗಂಗೆ— ।
ಲೋಕಸೇವೆಗೆ ನಮಗೆ ನೆಲೆಯೆಲ್ಲಿ ಕೊನೆಗೆ? ॥ ೧೬ ॥

ಸೃಷ್ಟಿಗೊಳಗಾರೋಗ್ಯ ಖಾತೆಯುದ್ಯೋಗದಾ ।
ಕಷ್ಟವನು ಸಹಿಸಿ ಬಂದಿರುವ ನಮ್ಮಿಂದ ॥
ಭ್ರಷ್ಟರಾದವರಾರು? ಗಟ್ಟಿಯಲಿ ನುಡಿವಿರೇ? ।
ಗಟ್ಟಿಗರೆ! ಬಿಟ್ಟಿವಿದೊ! ವಹಿಸಿಕೊಳ್ಳುವಿರೇ? ॥ ೧೭ ॥

ಶ್ರೇಷ್ಠಕುಲದವರೆನಿಸುವಾ ಬುಧರ ನಿಲ್ಲಿಸಲಿ ।
ಕಷ್ಟಪಡುವೀ ಪಂಚಮುಸ್ಥಾನದಲ್ಲಿ ॥
ಎಷ್ಟು ಸಂಕಟವಾಗಬಹುದಾಗಳೆಂಬುದನು ।
ದೃಷ್ಟಾಂತವಾಗಿ ನೋಡುವಿರೆ! ನೀವದನು? ॥ ೧೮ ॥

ಮಾನವೀಚಕ್ರದಾ ಮೇಲೆ ನಿಂತಾ ಬುಧರೆ ।
ತ್ರಾಣದಿಂದಾನತರನೊದೆಯಲೆಳಸಿದರೆ ॥
ಮಾನವ ಸ್ಥಿತಿಗಳೇನಾಗುವುವು ಬಲ್ಲಿರೇ?
ದೀನರಾದೆಮ್ಮನ್ನು ಬಲದೊಳೊದೆಯುವಿರೇ? ॥ ೧೯ ॥

IV

'ಹೊಲೆಯು ಹೊರಗಿಹನೇ? ಊರೊಳಗಿಲ್ಲವೇ?' ಹಲರು ।
ಕುಲಜರಲಿ 'ಕರ್ಮಚಂಡಾಲ' ರಾಗಿಹರು! ॥
ಸುಲಭದಲಿ 'ಜನ್ಮಚಂಡಾಲ'ರೆಂದೆಮ್ಮನ್ನು ।
ಹಳಿಯದಿರಿ ಶ್ರೀ ಪುರಂದರ ತತ್ವವಿದನು ॥ ೨೦ ॥

ನಮ್ಮ ಪೂರ್ವಜರಲ್ಲಿ ಕೆಲವರಾ ಚಂಡಾಲ– ।
ಕರ್ಮವೆಸಗಿರಬಹುದು ಮಡಿದರವರೆಲ್ಲ! ॥
ನಿರ್ಮಲರು ನಾವು ಚಂಡಾಲ ಕರ್ಮದೊಳಿಲ್ಲ ।
ಧರ್ಮಪಥದಲಿ ನಡೆದುಕೊಂಡಿರುವೆವಲ್ಲಾ! ॥ ೨೧ ॥

'ಕೊಂದವಗೆ ಕೊಲೆ'ಯಲ್ಲವೇ? ಮಿಕ್ಕವರಿಗೇನು? ।
ಹಿಂದಿನವರಪರಾಧದಲ್ಲಿ ನಮಗೇನು? ॥

ಇಂದೀಗ ತೋಳ ಕುರಿಗಳಾ ವಾದವನು ।
ಮುಂದಿರಿಸಿ ನಮ್ಮೊಡನೆ ವಾದಿಸುವಿರೇನು? ॥ ೨೨ ॥

ಕೆಸರಿನಲಿ ಹುಟ್ಟಿದರೆ––ಕಮಲದಲಿ ಕೆಸರುಂಟೆ? ।
ವಿಷಧರನ ಫಣಿಯ-ಮಣಿಯಲ್ಲಿ ವಿಷವುಂಟೇ? ॥
ಹಸುಗಳಾ ಕ್ಷೀರದಲಿ–ರಕ್ತದಾ ಕಲೆಯುಂಟೆ? ।
ರಸಪೂರ್ಣ ಜೇನಿನಲಿ ನೊಣದೆಂಜಲುಂಟೇ? ॥ ೨೩ ॥

ಬಲ್ಲಿರೇ ಋಷಿ, ನದೀ, ನದ, ಮಹಾತ್ಮರ ಮೂಲ ।
ವೆಲ್ಲಿಂದ ಪುಣುಗು ಕಸ್ತೂರಿಗಳ ಮೂಲ? ।
ಬಲ್ಲಿರೇನೈ ವಿಶ್ವಮೂಲವನು ಶೋಧಕರೆ–– ।
ಬಲ್ಲವರೆ! ಜನ್ಮಚಂಡಾಲರೆನ್ನುವಿರೇ? ॥ ೨೪ ॥

ಹಿಂದೆ ಗುರು ಶಂಕರನು ಚಂಡಾಲಗಿದಿರಾದ ।
ಸಂಧಿಯಲಿ ನಡೆದಾತ್ಮದಾ ವಾದದಿಂದ–– ॥
ಸಂಧಿಸಿದ 'ಹೊಲೆ'ಯಾರಿಗೆಂದಾಯ್ತು ಬಲ್ಲಿರೇ! ।
ಬಾಂಧವರೆ! ಸರ್ವಾತ್ಮ ತತ್ವ ಬೋಧಕರೇ! ॥ ೨೫ ॥

V

ಉತ್ತಮೋತ್ತಮ ಜಾತಿಯಲಿ ಹುಟ್ಟಿ ಕೆಲರು ಪುರು ।
ಷೋತ್ತಮರು 'ಚಂಡಾಲಕರ್ಮ'ವೆಸಗುವರು! ॥
ಹತ್ತಿರಕೆ ಬರಬೇಡಿರೆಂದು ನಾವಂಥವರ ।
ನೊತ್ತಟ್ಟಿಗಟ್ಟಲೇ ಗುಣವಿಲ್ಲದವರ? ॥ ೨೬ ॥

ಮುಟ್ಟಲಾಗದ ಜನರು ಯಾರೆಂದು ತಿಳಿದಿರೇ? ।
ಹುಟ್ಟೂರ ಸೋದರರ ಹೊರಗಟ್ಟುವರೇ! ॥
ಮುಟ್ಟಲಾರೆವು ನಾವು––ದೂರ ನಿಲ್ಲಿರಿ ನೀವು–– ।
ನಿಷ್ಠೆಯಲಿ ನಿಂತಿಹೆವು––ಶುದ್ಧರಾಗಿಹೆವು! ॥ ೨೭ ॥

ಮಕ್ಕಳೈವರ ಬಣ್ಣವೇನಾದರೇನಿನ್ನು ।
ಮಕ್ಕಳನು ಮುಟ್ಟದಿರುವಳೆ ತಾಯಿ ತಾನು? ॥

ಚಿಕ್ಕಾ ಸಹೋದರಗೆ ಹಿರಿಯನಾಲ್ವರು ಸರಿಯು ।
ಹಕ್ಕಿನಂಶವನೀಯಬೇಡವೇನಯ್ಯಾ? ॥ ೨೮ ॥

ಮಿಕ್ಕ ಹಿಂದೂ ಜನರು ನಡೆವ ಪಥದಲಿ ಪದವ ।
ಸಿಕ್ಕಲೆಮಗಾತಂಕವೆಸಗದಿರಿ ಛಲವ-- ॥
ಚಿಕ್ಕವರು ನಮ್ಮವರು ಭೇದವಿದ ಸೈರಿಸರು ।
ಧಿಕ್ಕರಿಸಿ--ಮುಂದರಿಸಿ--ಕಾಲನಿಡುತಿಹರು ॥ ೨೯ ॥

ಪತಿತರಾದವರನುದ್ಧರಿಸಿ ಪಾವನಗೈವ ।
ಕೃತಿಯಿಂದ 'ಪತಿತಪಾವನ'ನಾದ ದೇವ-- ॥
ಕ್ಷಿತಿಯೊಳಾ ಪತಿತ ಪಾವನ ದೇವನುಂದಿರವ ।
ಪತಿತರೆಂದೆನಿಸಿದವರಿಗೆ ಬಿಡಿರಿ ಪಥವ ॥ ೩೦ ॥

VI

ನಿಮ್ಮವರನನುಸರಿಸಿ ಭೇದಬುದ್ಧಿಯ ಗಳಿಸಿ ।
ನಮ್ಮೊಳಗೆ ಹಲವು ಪಂಗಡಗಳ ಬೆಳೆಸಿ-- ॥
ನಮ್ಮವರು ಕೆಟ್ಟರೈ--ನಿಮ್ಮ ಕಟ್ಟುಗಳಿಂದ ।
ನಮ್ಮ ಜನರೆಲ್ಲರೊಂದಾದೆವಿಂದಿಂದ ॥ ೩೧ ॥

ಸುರೆಯ ತೊರೆದೆವು-ನೀಚಕರ್ಮಗಳ ತೊಲಗಿದೆವು ।
ಧರಣಿಯಲಿ ಶುಚಿಯಾಗಿ ನಡೆದುಕೊಳ್ಳುವೆವು ॥
ಅರಿತು ಸದ್ವಿದ್ಯೆಯನು ಕಲಿತು ಬಂದೆವು ನಾವು ।
ಸರಿಯಾದ ಹಿಂದೀಯರೆನಿಸಿ ಬಾಳುವೆವು ॥ ೩೨ ॥

ನಿರ್ಮಲಾಂತಃಕರಣ ಶುದ್ಧರಾಗಿರುತಿಹೆವು ।
ಧರ್ಮಕರ್ಮದೊಳಿಹೆವು ನೀತಿಯನು ಬಿಡೆವು ॥
ನಮ್ಮ ಹಕ್ಕುಗಳನಿಂದೆಮಗೆ ಬಿಡಿರೈ ನೀವು ।
ಸುಮ್ಮನೆಮ್ಮನು ಕೆಣಕಬೇಡಿರೆನ್ನುವೆವು ॥ ೩೩ ॥

ದೂರ ಬಿಟ್ಟಿರಿ ನೀವು--ದಾರಿ ಬಿಟ್ಟೆವು ನಾವು ।
ದೂರದವರಿಗೆ ದಾರಿಯನ್ನು ತೋರಿದೆವು ॥

ದೂರ ಬಿಡದಿರಿ ನೀವು—ದಾರಿ ಬಿಡೆವೈ ನಾವು।
ದೂರದವರಿಗೆ ಬಂದ ದಾರಿ ತೋರುವೆವು ॥ ೩೪ ॥

ನಿಮ್ಮಂತೆ ಭಾರತಾಂಬಿಕೆಯ ಮಕ್ಕಳು ನಾವು।
ನಿಮ್ಮಂತೆ ಹಿಂದೀಯರಾಗಿ ಜನಿಸಿದೆವು — ॥
ನಿಮ್ಮಂತೆ ಭಾರತದೆ ಬದುಕಬೇಕೆಂದಿಹೆವು।
ನಿಮ್ಮಂತೆ ನಾವೆಂದು ಭಾವಿಸಿರಿ ನೀವು ॥ ೩೫ ॥

ಊರ ಕೆರೆ ಬಾವಿಯಲಿ-- ಸತ್ರಸಾಲೆಗಳಲ್ಲಿ।
ದಾರಿಕೇರಿಗಳಲ್ಲಿ—ದೇಗುಲಂಗಳಲಿ--।
ಸೇರಿ ಸರ್ವರ ತೆರದೊಳಿರಲು ನಮಗೆಡೆಯಿರಲಿ।
ಭಾರತೀಯರಲಿ ಸಮಭಾವವೆಸೆದಿರಲಿ! ॥ ೩೬ ॥

VII

ವರದಕರವಿತ್ತಿಹನಜಾಮಿಳಗೆ ಕನಕಸಿಗೆ।
ವರ ವಿಠೂ ನಂದ ಚೋಖಾಮಿಳಾದ್ಯರಿಗೆ-- ॥
ವರದಹಸ್ತನ ಪತಿತಪಾವನನ ಪದವಿರುವ।
ವರ ಪುಣ್ಯಭೂಮಿಯಲಿ ಹೊಲೆಯುಂಟೆ? ದೇವಾ! ॥ ೩೭ ॥

ಪಂಚಬಾಣನ ಪಿತನು-- ಪಂಚಾಸ್ಯ ಪರಶಿವನು।
ಪಂಚಾಂಗ ಕೋವಿದನು--ದೇವಷಣ್ಮುಖನು ॥
ಪಂಚಕಜ್ಜಾಯವನು ಬಯಸುವ ಗಜಾನನನು।
ಪಂಚಮರು ಬಂದೊಡನೆ 'ಹೊಲೆ'ಯೆನುವರೇನು? ॥ ೩೮ ॥

ಪಂಚವಾದ್ಯಪ್ರಿಯಳು ಶ್ರೀ ಭಾರತೀ ದೇವಿ।
ಪಂಚಾಮೃತಪ್ರಿಯಳು ಪಾರ್ವತೀ ದೇವಿ ॥
ಪಂಚಾರತಿಪ್ರಿಯಳು ಧನಲಕ್ಷ್ಮಿ ದೇವಿಯರು।
ಪಂಚಮರ ಭಕ್ತಿಯನು ಬಯಸರೇನವರು? ॥ ೩೯ ॥

ಪಂಚಮೋದ್ಧಾರಕ ವಸಿಷ್ಠ –ವಿದ್ಯಾರಣ್ಯ!।
ಪಂಚಮಶರಣ್ಯ ರಾಮಾನುಜವರೇಣ್ಯ! ॥

ಪಂಚಮುಹಿತಾಳವಂದಾರ ಬಸವೇಶ್ವರರು! ।
ಪಂಚಮರ ಬಿಡುವರೆ ಮಹಾತ್ಮರಾದವರು? ॥ ೪೦ ॥

ಪಾಂಚಜನ್ಯದ ಬಲವು ಶ್ರೀಕರಗೆ ಸಿರಿಯಾಯ್ತು! ।
ಪಂಚಪಾಂಡವ ಬಲದಬಲೆಗೆ ಶುಭವಾಯ್ತು! ॥
ಪಂಚಮ ಸ್ವರಬಲದ ಕೋಗಿಲೆಗೆ ಹೆಸರಾಯ್ತು! ।
ಪಂಚಮಾಶ್ರಿತಬಲದ ಧರೆಗನ್ನವಾಯ್ತು! ॥ ೪೧ ॥

ಪಂಚಭೂತಂಗಳೊಲವಿಂದಲೀ ಪ್ರಕೃತಿಯಿದೆ– ।
ಪಂಚವಾಯುಗಳ ಸುಗತಿಯಲಿ ಜೀವವಿದೆ– ॥
ಪಂಚಾಂಗಬಲದಲೀ ವಿಶ್ವದಲಿ ಶಕ್ತಿಯಿದೆ– ।
ಪಂಚಮರ ಬಲದಿಂ ಪ್ರಪಂಚ ಬೆಳಗುತ್ತಿದೆ ॥ ೪೨ ॥

ಐದು ಬೆರಳುಗಳೈದೆ ಕೂಡಿದಾ ಮುಷ್ಟಿಯಲಿ ।
ಸೋದರರೆ! ಬಲವಧಿಕವೆನಲು ಲೋಕದಲಿ ॥
ಐದನೇ ವರ್ಣದವರೆಂದು ಪಂಚಮ ಜನರ ।
ಬೈದು ಬಹುದೂರದಲಿ ನಿಲ್ಲಿರೆನ್ನುವಿರಾ? ॥ ೪೩ ॥

ಸರ್ವತ್ರ ಸಾರ್ವಜನಿಕ ಪ್ರೇಮ ಹರಡಿರಲಿ! ।
ಸರ್ವಜನರೊಳಗೈಕಮತ್ಯವೆಸೆದಿರಲಿ! ॥
ಸರ್ವ ಹರಿಜನರು ಹಿಂದುಗಳೆಂಬ ತಿಳಿವಿರಲಿ! ।
ಸರ್ವ ಭಾರತದಲ್ಲಿ ಸ್ವಾತಂತ್ರ್ಯವಿರಲಿ! ॥ ೪೪ ॥

[~~ಸ್ವದೇಶೀ ಪ್ರಚಾರಕ ಅಕ್ಟೋಬರ~~ ೧೯೨೨]

ದರ್ಶನ

ದೇವ ದರ್ಶನಕಾಗಿ ಬಂದಿಹೆವು–ನಾವು– ॥ ಪ ॥
ಪಾವನ ಸುಮೂರ್ತಿಯನು ಕಾಣಲಿಚ್ಛಿಸೆವು ॥ ಅ. ಪ. ॥

ಆ ದಯಾನಿಧಿಯಾದ ಜಗದೀಶನಾತನಿಗೆ ।
ಭೇದವಿರುವುದೆ ಸಕಲ ಜಗದ ಜನಗಳಲಿ? ॥

ಸೋದರರೆ! ದಯಮಾಡಿ ನಮಗೆ ದಾರಿಯ ಬಿಡಿರಿ– ।
ಕ್ರೋಧವನು ಮಾಡದಿರಿ–ಹೊರಗೆ ದೂಡದಿರಿ! ॥ ೧ ॥

ಆದಿಕವಿ ವಾಲ್ಮೀಕಿ ಮುನಿಯು ನುಡಿಸಿದ ದೇವ– ।
ಸಾಧುವಾದಾ ಕಬೀರನಿಗೊಲಿದ ದೇವ– ॥
ಸಾದರದೊಳಾ ಕನಕನಿಗೆ ಕಾಣಿಸಿದ ದೇವ– ।
ಮೋದದಿಂ ಕರುಣಿಸುವನೆಮಗೆ ದರುಶನವ– ॥ ೨ ॥

ವಾನರಾನೀಕದೊಡನಾಡಿ ತಿರುಗಿದ ದೇವ– ।
ದಾನವೇಂದ್ರನ ಮಗನ ಸಲಹಿರುವ ದೇವ– ॥
ದೀನಗೋವಳರೊಡನೆ ನಲಿದಾಡಿದಾ ದೇವ– ।
ದೀನಬಾಂಧವ ಕೊಡುವನೆಮಗೆ ದರುಶನವ– । ॥ ೩ ॥

ಶಬರಿಯೆಂಜಲ ತಿಂದ ಭಕ್ತವತ್ಸಲ ದೇವ– ।
ನಭಯ ಹಸ್ತವನಜಾಮಿಳಗಿತ್ತ ದೇವ– ॥
ಪ್ರಬಲ ಪಾಂಡವರೈವರರಸಿಗೊಲಿದಾ ದೇವ– ।
ಶುಭ ವಿಭವ ಪಾಲಿಸುವನೆಮಗೆ ದರುಶನವ ॥ ೪ ॥

ಆ ಸುರಾ ರಾಕ್ಷಸಿಯ ನಾಡಿನಿಂದಟ್ಟಿದೆವು– ।
ದೋಷ ಹಿಂಸಾಕ್ರಮದ ಪಥವ ಬಿಟ್ಟಿಹೆವು ॥
ದೇಶಸೇವೆಗೆ ನಮ್ಮ ಸರ್ವವನ್ನೀಯುವೆವು ।
ದೇಶಬಂಧುಗಳೆ! ನಿಮ್ಮೊಡನಿಹೆವು–ನಾವು– ॥ ೫ ॥

ಹಿಂದಿನಪರಾಧ ಶತವಿದ್ದರೂ ಕ್ಷಮಿಸಿರೈ– ।
ಬಂಧುಗಳೆ! ದೇವ ದರ್ಶನವ ಕರುಣಿಸಿರೈ– ॥
ಹಿಂದುಗಳು ನಾವು–ನಿಮ್ಮವರೆಂದು ನೆನೆಸಿರೈ– ॥
ಗಾಂಧಿ ಸಂದೇಶವನು ತಿಳಿದು ಪಾಲಿಸಿರೈ!– ॥ ೬ ॥

[~~ನವಯುಗ, ಜಡವರಬಂಧು ೧–೨–~~ [೧೯೨೨.]]

ಮಂಗಳೂರಿನಲ್ಲಿ ಗಾಂಧಿ ಸಂದರ್ಶನಂ

ಸ್ವಾಗತಗೀತೆ

೨೪-೨-೩೪.

~~ಧಾಟಿ:—(ಭಾರತೀಯರೆ ನಮ್ಮ ಭಾಗ್ಯಸಂಪತ್ತು.)~~

ಸ್ವಾಗತಂ–ಹರಿಜನಬಂಧು ಗಾಂಧಿಜಿಗೆ ।
ಸ್ವಾಗತಂ ಮಾನ್ಯ ಮಹಾತ್ಮಾ ಮೋಹನಗೆ ॥
ಸ್ವಾಗತಂ–ಭಾರತದೇಶಬಂಧುವಿಗೆ ।
ಸ್ವಾಗತಂ–ವಿಖ್ಯಾತ ಲೋಕಮಾನ್ಯನಿಗೆ ॥ ೧ ॥

ಹಿಂದೂಸಮಾಜದೊಳೆಸೆವ ಪಂಚಮರ ।
ಹಿಂದೆ ನಿಲ್ಲಿಸಲೇಕೆ ದೀನಸೋದರರ? ॥
ಬಂಧುಗಳವರನುದ್ಧರಿಸಬೇಕೆಂದು ।
ಬಂದ ಮಹಾತ್ಮಗೆ ಸ್ವಾಗತವಿಂದು ॥ ೨ ॥

ನಮ್ಮಂತೆ ದೇವದರ್ಶನಕರ್ಹರವರು ।
ನಮ್ಮಂತೆ ಮಾನವಸ್ವಾತಂತ್ರ್ಯಪ್ರಿಯರು ॥
ನಮ್ಮಂತೆ ಹರಿಜನರೆಂದು ಘೋಷಿಸುತ ।
ನಮ್ಮೂರಿಗೈತಂದ ಗಾಂಧಿ! ಧೀಮಂತ ॥ ೩ ॥

ಊರಿನೊಳೆಲ್ಲವರೊಂದೇ ಭಾವದಲಿ ।
ಸೇರಿ ಸಮಾಜದೊಳೈಕ್ಯದಿಂದಿರಲಿ ॥
ಭಾರತೀಯರು ಹರಿಜನರವರೊಂದೇ ।
ಭಾರತಾತ್ಮಜರೆಂದು ಸಾರುತ್ತ ಬಂದೆ ॥ ೪ ॥

ದೀನಜನೋದ್ಧಾರ ಧರ್ಮಕರ್ಮದಲಿ ।
ಪ್ರಾಣವನ್ನರ್ಪಿಪೆನೆಂಬ ದೀಕ್ಷೆಯಲಿ ॥
ಜ್ಞಾನದಿಂದಡಿಯಿಟ್ಟು ನಡೆವ ಸುವಿಭವ ।
ದೀನಬಾಂಧವನೀವ ನಿನಗೆ ಸುಯಶವ ॥ ೫ ॥

ಹರಿಜನಪಾವನ ಕಾರ್ಯದಕ್ಷನಿಗೆ ।
ಪರಜನಜೀವನ ರಾಷ್ಟ್ರಾಧ್ಯಕ್ಷನಿಗೆ ॥

ಭರತಖಂಡೋದ್ದಂಡ ದೇಶಭಕ್ತನಿಗೆ ।
ವರ ಜಯಲಕ್ಷ್ಮೀಪ್ರಸನ್ನ ಮೋಹನಗೆ ॥ ೬ ॥

[ಪ್ರತಿಯೊಂದು ಪದ್ಯದ ಕೊನೆಗೆ "ಜೋ–ಜೋ" ಎಂದು ಸೇರಿಸಿ–
ಜೋಗುಳಧಾಟಿಯಲ್ಲಿಯೂ ಹೇಳಬಹುದು.]

[೧೯೨೪]

ಸ್ವಾಗತಗೀತೆ

ಧಾಟಿ: - (ರಾಗ–ಕಾಂಭೋದಿ; ತಾಳ–ಝಂಪೆ.)

ಸ್ವಾಗತಂ ಕರ್ಣಾಟ ಬಂಧುವರ್ಯರಿಗೆ ॥ ಪ ॥
ಸ್ವಾಗತಂ **ಪ್ರಾಂತಿಕಸಭಾ** ಸಮುಸ್ತರಿಗೆ ॥ ಅ. ಪ. ॥

ಭಾರತೀಹಿತ ರಾಷ್ಟ್ರಸಭೆಯ ಕರೆಯನು ಕೇಳಿ ।
ಭಾರತೀ ಸ್ವಾತಂತ್ರ್ಯಸಮರಘೋಷದಲಿ ॥
ಭಾರತೀ ಸಾಮ್ರಾಜ್ಯ ಯುದ್ಧರಂಗಕೆ ತೆರಳಿ ।
ಭಾರತೀಪ್ರಿಯರೆನಿಸಿ ಬಂದಿರೇ ಮರಳಿ? ॥ ೧ ॥

ಅಸಹಕಾರದ ರಣದೆ ಸತ್ಯಾಗ್ರಹಾಧ್ವರದ ।
ಪೆಸರಾಂತ ಕರನಿರಾಕರಣ ಚಳವಳದೆ ॥
ಅಸಮಸಾಹಸದಿಂದ ದೇಶ ಸೇವೆಯಗೈದು ।
ಬಸವಳಿದವರು ಬಂದಿರೇ ಭರದೊಳಿಂದು? ॥ ೨ ॥

ಸೆರೆಮನೆಗೆ ಬೆದರದೆಯೆ ಲಾಠಿಗಳಿಗಲುಗದೆಯೆ ।
ತಿರೆಯ ಸೇವಾತುರದೆ ಗುಂಡಿ ಗಂಜದೆಯೆ ॥
ಹರಿಜನರೆ ಮೊದಲಾಗಿ ದುಡಿದ ಮಿತಬಾಂಧವರು ।
ನೆರವಾಗಿ ಬಂದಿರೇ ಭ್ರಾತೃಭಗಿನಿಯರು? ॥ ೩ ॥

ರಾಜಿಸುವ ರಾಷ್ಟ್ರ ಸಭೆಯಧ್ಯಕ್ಷ ಪದವೀಂದ್ರ ।
ರಾಜೇಂದ್ರನಿಲ್ಲಿಗೈತಂದನದರಿಂದ ॥
ತೇಜದಿಂ **ಮಂಗಲಾಪುರ**ದೊಳೆಸೆವೀ ಸಭೆಗೆ ।
ಪೂಜನೀಯರು ಬಂದಿರೇ ಧರೆಯ ಕಡೆಗೆ? ॥ ೪ ॥

ಸುಪ್ರಸಿದ್ಧ ಸರೋಜಿನೀದೇವಿಯೊಲಿದಿರುವ ।
ಸುಪ್ರಸನ್ನಾಧ್ಯಕ್ಷ ಪೀಠಸಂಪದವ ॥

ಸ್ವಪ್ರಕಾಶ **ಶ್ರೀಪ್ರಕಾಶ** ಗರ್ಜಿಸುವುದಕೆ
ಸುಪ್ರಭಾವದೆ ಬಂದಿರೇ ಮಹೋತ್ಸವಕೆ? ॥ ೫ ॥
ಸ್ವಾಗತಂ ಭಾರತೀಪ್ರಿಯ ಲೋಕಮಾನ್ಯರಿಗೆ ।
ಸ್ವಾಗತಂ ಸ್ವಾತಂತ್ರ್ಯಧನ ಮಹಾತ್ಮರಿಗೆ ॥
ಸ್ವಾಗತಂ ನಿಖಿಲ ಕರ್ಣಾಟಕದ ಸಭಿಕರಿಗೆ ।
ಸ್ವಾಗತಂ ಹಿಂದೀ ಸ್ವರಾಜ್ಯ ಯೋಧರಿಗೆ! ॥ ೬ ॥

[ಪ್ರಭಾತ ೧೨–೫–೪೫. ರಾಷ್ಟ್ರಬಂಧು ೧೪–೪–೩೫.]

ಮಂಗಳೂರಿಗೆ

ಅಧ್ಯಕ್ಷ ಜವಾಹರಾಗಮನಂ

೧೦–೨–೧೯೩೭.

~~ಧಾಟಿ:—~~ (ಮೂರ್ತಿಮಂತ)

ಸ್ವಾಗತಂ ಸ್ವರಾಜ್ಯವೀರ । **ರಾಷ್ಟ್ರಪತಿ ಜವಾಹರ** ॥ ಪ ॥
ಸ್ವಾಗತಂ ಸ್ವತಂತ್ರಭಾರ । ತೀವಿಚಾರಮಂದಿರ ॥ ಅ. ಪ. ॥
ದೇಶಹಿತಸಮರ್ಥಸದಾ । **ಲೋಕಮಾನ್ಯ** ಸಂಪದ ।
ದೇಶಬಂಧುಕುಲವಿನೋದ । ದೀನಜನಸುಖಪ್ರದ ॥ ೧ ॥
ಭಾರತಾರ್ಯಜೀವಜ್ಯೋತಿ । ಘನ **ಮಹಾತ್ಮ** ಸಾರಥಿ ।
ಧಾರಿಣೀಂದ್ರನಿಭವಿಭೂತಿ । '**ಅನಭಿಷಿಕ್ತ ಭೂಪತಿ**' ॥ ೨ ॥
ರಾಷ್ಟ್ರಸಭಾಧ್ಯಕ್ಷ ಕಾರ್ಯ । ದಕ್ಷ ಭಾರತೀಪ್ರಿಯ ।
ರಾಷ್ಟ್ರಪತಿ ಸ್ವದೇಶನಿಲಯ । ಸದಯಹೃದಯ ನಿರ್ಭಯ ॥ ೩ ॥
ಸ್ವಾಗತಂ ಸ್ವರ್ಗೀಯ **ಕಮಲಾ** । **ನೆಹರುಮನೋ** ಮಂಗಲ ।
ಸ್ವಾಗತಂ ಸುಕೀ । ರ್ತಿವಿಮಲ । ಭಾಮಿನೀ ಸುಮಂಗಲ ॥ ೪ ॥
ಸ್ವಾಗತಂ ಸುರೇಂದ್ರವಿಭವ । **ಮೋತಿಲಾಲ**ಸಂಭವ ।
ಸ್ವಾಗತಂ ಮಹಾನುಭಾವ । ನವ**ಜಯಂತ**ವೈಭವ ॥ ೫ ॥
ಸ್ವಾಗತಂ ಸಾಮ್ರಾಜ್ಯಸಮರ । ವಿಜಯವಿಜಯಭೀಕರ ।
ಸ್ವಾಗತಂ '**ಸ್ವತಂತ್ರಭಾರ । ತಾಭಿರಾಮ**'–**ಶ್ರೀ**ಕರ ॥ ೬ ॥

[~~ಸ್ವದೇಶಾಭಿಮಾನಿ ೧೨–೨–'೩೭;~~ ವಿನೋದಭಾರತ ~~೧೦–~~ ೩೭]

ಆರ್ತಾಲಾಪ

(ಸಮತವಾದ)

ಧಾಟಿ:– (ಕರ್ಣಾಟವೀರರೇಳಿ.)

ಶ್ರೀಮಾನ್ಯರೆಲ್ಲ ಕೂಡಿ ।
ಪ್ರೇಮಾತ್ಮರಾಗಿ ನೋಡಿ ॥ ಪ ॥

ಸಾಮಾನ್ಯಜನಕೆ ದಯ ಮಾಡಿ ।
'ಸಾಮ್ಯತೆ'ಯ ನೆಲೆಯ ನೀಡಿ ॥ ಅ. ಪ. ॥

ಜಗದೀಶನೊಬ್ಬನವ ತಾನು ।
ಜಗವಿದನು ಸೃಷ್ಟಿಮಾಡಿದನು ॥
ಜಗದೆಲ್ಲ ಜೀವರಾಶಿಯನು ।
ಮಿಗೆ ಸಮತೆಯಿಂದ ನೋಡುವನು ॥ ೧ ॥

ಸರ್ವೇಶನೊಡೆತನದ ಜಗವು ।
ಸರ್ವರ ಸಮಾನ ಮಂದಿರವು ॥
ಸರ್ವಾಧಿಕಾರಗಳ ನೀವು ।
ನಿರ್ವಹಿಸಲೇನು ಕಾರಣವು? ॥ ೨ ॥

ದಿಕ್ಕಿಲ್ಲವೇನು ದೀನರಿಗೆ? ।
ಹಕ್ಕಿಲ್ಲವೇನು ಧಾರಿಣಿಗೆ? ॥
ಸೊಕ್ಕಿಲ್ಲವೇನು ಧನಿಗಳಿಗೆ? ।
ಮಿಕ್ಕವರ ಸುಲಿವ ಧನಿಕರಿಗೆ? ॥ ೩ ॥

ಉರಿಬಿಸಿಲು, ಸಿಡಿಲು, ಮಳೆಗಳಲಿ ।
ಬಿರುಗಾಳಿ ಸುಳಿವ ಚಳಿಗಳಲಿ ॥
ಮರೆಸಿರಲು ಮನೆಗಳೆಮಗೆಲ್ಲಿ? ।
ಮೊರೆಯಿದನು ಕೇಳ್ವರಾರಿಲ್ಲಿ? ॥ ೪ ॥

ಅರೆಹೊಟ್ಟೆಗಿಲ್ಲದಂಥವರು- ।
ನೆರೆಬಟ್ಟೆಗಿಲ್ಲದಿರುವವರು- ॥

ದೊರೆತನದ ನಿಮ್ಮ ಸೇವಕರು- ।
ಪರಿಕಿಸಲು ಸ್ವರ್ಣಧರೆಯುವರು! ॥ ೫ ॥

ಒಡಲುರಿಸಿ, ದಣಿಸಿ, ರಕ್ತವನು ।
ಕುಡಿವಂತೆ ಹೀರಿ ಬಡವರನು ॥
ದುಡಿಸುತ್ತ ಪಡೆವ ಭೋಗವನು!
ಸುಡಿರಿನ್ನು ಧನದ ದರ್ಪವನು ॥ ೬ ॥

ಒಡೆತನಕೆ ಬಾಗಿಕೊಂಡಿರೆವು ।
ಬಡತನದೆ ಬಾಳಿಕೊಂಡಿರೆವು ॥
ಕಡೆಗೊಳಲಿ ದಾಸ್ಯಬಂಧನವು ।
ತೊಡಗಿರಲಿ '**ಸಾಮ್ಯ**' ಜೀವನವು! ॥ ೭ ॥

ಒಡೆತನವು ಸಾಕು **ಕೆಲವರಿಗೆ** ।
ಬಡತನವು ಸಾಕು **ಹಲವರಿಗೆ** ॥
ಒಡಹುಟ್ಟಿದವರ '**ಸಾಮ್ಯ**ತೆ'ಗೆ ।
ನಡೆಯುವುದು ಲೇಸು ಸಕಲರಿಗೆ ॥ ೮ ॥

ಗುಡಿಸಲಿಗೆ ಬೇಕೆಮಗೆ ನೆಲವು ।
ಕುಡಿಯಲಿಕೆ ಬೇಕೆಮಗೆ ಜಲವು ॥
ದುಡಿಯಲಿಕೆ ಬೇಕೆಮಗೆ ಹೊಲವು ।
ತಡೆಯಿರದೆ ಸಾಗಲೀ ಜಗವು! ॥ ೯ ॥

ಕೊಡಿರೆಮಗೆ ನಮ್ಮ ಪಾಲುಗಳ ।
ಬಿಡಿರೆಮಗೆ ನಮ್ಮ ಹಕ್ಕುಗಳ ॥
ಒಡಲುರಿಸಿ '**ಸಾಮ್ಯವಾದಿ**'ಗಳ ।
ಕಿಡಿಯಿಂದ ನಿಮಗೆ ಕೆಡುಗಾಲ! ॥ ೧೦ ॥

ನೀತಿಯಲಿ ಭರತಖಂಡದಲಿ ।
ಪ್ರೀತಿಯಲಿ **ಸಮತೆ** ನೆಲೆಸಿರಲಿ! ॥
ಸ್ವಾತಂತ್ರ್ಯಭೇರಿ ಮೊಳಗಿರಲಿ! ।
ಖ್ಯಾತ ಸ್ವರಾಜ್ಯ ರಾಜಿಸಲಿ! ॥ ೧೧ ॥

ಸರ್ವತ್ರ ಬಂಧುಜನ ಭಾವ ।
ಕಳೆಗೊಳಲಿ ಸಮತಾಪ್ರಭಾವ ॥
ಸರ್ವ ಸ್ವತಂತ್ರ ಭಾರತವ ।
ಬೆಳಗಿಸಲಿ ಕೀರ್ತಿಯಲಿ ದೇವ! ॥ ೧೨ ॥

[~~ನವಯುಗ ೨೪~~] [೨-೫-೩೮]

ಭಾರತ ಸಿಂಹನಾದ

(೯ – ೮ – ೧೯೪೨)

(~~ಧಾಟಿ: 'ಬನ್ನಿರಯ್ಯ । ಬನ್ನಿರಯ್ಯ'~~)

Quit-India Quit-India
ಕ್ವಿಟ್ಟಿಂಡಿಯ । ಕ್ವಿಟ್ಟಿಂಡಿಯ ।
ಬಿಟ್ಟುಬಿ । ಡಿಂಡಿಯ ॥ ಪ. ॥

ನೆಟ್ಟಗೆ ನಿನ್ನಿಂ । ಗ್ಲಾಂಡಿಗೆ । ನಡೆ ನಡೆ ।
ಬಿಟ್ಟುಬಿ । ಡಿಂಡಿಯ ॥ ಅ. ಪ. ॥ ಈಗಲೆ—

'ಚಲ್ ಜಾವ್' । ಚಲ್ ಜಾವ್ । ವಿಲಾಯ । ತಿಗೆ ಜಾವ್ ।
ತೊಲಗು—ಭಾರತವ ॥
ಛಲವನು । ಸುಡು ಸುಡು । ಬಲವನು । ಬಿಡು ಬಿಡು ।
ನೆಲವನು ಬಿಟ್ಟುಕೊಡು ॥ ೧ ॥ ನಮ್ಮ—

'ನಮ್ಮದು ನಮಗೆ'— । 'ನಿಮ್ಮದು ನಿಮಗೆ'— ।
ಧರ್ಮವ ತಿಳಿ – ಗೆಳೆಯಾ! ॥
ನಮ್ಮೊ ಜನ್ಮದ । ನಾಡೊಳ್ । ಪರರಾ ।
ಕರ್ಮವದೇಕಯ್ಯಾ ॥ ೨ ॥ ಪರರಾ—

ಗಾಂಧಿ ಮಹಾತ್ಮನ । ಹಿಂಸಾ ಯುದ್ಧಕೆ ।
ಮುಂದಡಿಯಿಡಿ – ಜನರೇ! ॥
ಬಂದುದು ಬರಲಿ – ಆಗುವುದಾಗಲಿ ।
ಸಂಧಿಸಿ – ಪ್ರಿಯ ಭಟರೇ ॥ ೩ ॥

ಕೃತಿಯನು ಮಾಡಿರಿ—ಇಲ್ಲವೆ—ಮಡಿಯಿರಿ ।
ಕ್ಷಿತಿಯಲಿ 'Do—or—Die' (ಡೂ-ಓರ್-ಡೈ) ॥
ಪಥದಲಿ ನಡೆಯಿರಿ । ಸೋತರೆ ಮಡಿಯಿರಿ ।
ಗತಿಯೇನಿಲ್ಲದಿರೇ! ॥ ೪ ॥

ಸುಭಾಸ ಚಂದ್ರೋದಯಂ?

(೨–೯–೧೯೪೬)

(ಭಾಮಿನಿ)

ರಾಜಿಸುವನೆ ಸುಭಾಸಚಂದ್ರನು ।
ತ್ರೈ ಜಗತ್ಕೀರ್ತಿಯ ಸುಭಾಸನು ।
ನೈಜ ಭಾರತ ಕುವಲಯಾಪ್ತನು ಮಾಯವಾದವನು ॥
ಆ ಜಗನ್ಮೋಹನ ವಿಲಾಸದ ।
ರಾಜನಸ್ತಮಿಸುತ್ತ ಮತ್ತಾ ।
ರಾಜನೇ ತಾನುದಿಸುವಂತೆ ಪ್ರಕಾಶನಾಗುವನೇ! ॥ ೧ ॥

ವಂಗದೇಶದೊಳುದಿಸಿ, ಭಾರತ ।
ರಂಗವನು ಬೆಳಗಿಸಿ, ಪರಾಹಿ ತ ।
ರಂಗಗಳ ಭೇದಿಸಿ, ವಿದೇಶಂಗಳಲಿ ಕಂಗೊಳಿಸಿ, ॥
ತುಂಗ ರಾಷ್ಟ್ರ ಜ್ಯೋತಿಯಾ ಬೆಳ ।
ದಿಂಗಳನು ಪಸರಿಸಿದ—'ಜೈ ಹಿಂದ್'— ।
ಸಂಗರಾತ್ಮ ಸುಭಾಸಚಂದ್ರನು ಮುದದೊಳುದಿಸುವನೇ! ॥ ೨ ॥

ಎಷ್ಟು ಮೋಡಗಳೊಡ್ಡುತಿರಲೇ ।
ನೆಷ್ಟು ಗೂಗೆಗಳಾಡುತಿರಲೇ ।
ನೆಷ್ಟು ಗ್ರಹಣಗಳಾಗುತಿರಲೇನಹುದು ಚಂದ್ರನಿಗೆ? ॥
ಸೃಷ್ಟಿಯಲಿ ಸ್ವೈರಿಸಲಸಾಧ್ಯದ ।
ಕಷ್ಟಬರಲೇನಮೃತಕರನಿಗೆ ।
ಭ್ರಷ್ಟಸಹನೆ ಸುಭಾಸಚಂದ್ರನು ತೇಜಗುಂದುವನೇ! ॥ ೩ ॥

ಭಾರತಾಂಬರದಲಿ ವಿರಾಜಿಸಿ ।
ದೂರದಾ ಪರವಿಟರ ನಡುಗಿಸಿ ।
ಭೂರಿ ಸುಕಲಾಧರ ಬುಧಾದರ ಮೂರ್ತಿಯೆಂದೆನಿಸಿ ॥
ವೀರಿ ಮೆರೆದ ಸುಭಾಸಚಂದ್ರನು ।
ಭಾರತಾಂಬೆಯ ಬಾಲಚಂದ್ರನು ।
ತೋರಿ ಕಣ್ಮರೆಯಾದವನು ನವ ಕಳೆಯೊಳುದಿಸುವನೇ! ॥ ೪ ॥

ಭಾರತೀ ಸ್ವಾತಂತ್ರ್ಯ ಸಮರದ ।
ಸಾರಥಿ ಮಹಾತ್ಮನು ಸ್ವರಾಜ್ಯ ।
ದ್ವಾರದುದ್ಘಾಟನೆಗೆ ಕಳುಹಿದನಾ ಜವಾಹರನ ॥ (೨-೯-'೪೬)
ಧೀರನಾತನ ಬೆಂಬಲಕೆ ವೈ ।
ದೋರಿ ತಾನಿಹುದುಚಿತವೆನುತಾ ।
ವೀರ ವಿಜಯೋಲ್ಲಾಸ ಶರಧಿಯ ಚಂದ್ರನುದಿಸುವನೇ! ॥ ೫ ॥

ಧರಣಿಯಲಿ ಸ್ವಾತಂತ್ರ್ಯ ಹೃದಯಾಂ ।
ಬರ ದಿವಾಕರ ವರ ಜವಾಹರ ।
ನಿರಲು ಮರೆಯಿನ್ನೇಕೆ ತಾನವನೊಡನೆ ಬೆಳಗಿರುತ ॥
ಧರೆಗೆ ಶಾಂತಿಯನೀವ ಧರ್ಮಾ ।
ತುರದೊಳುದಿಸುವೆನೆಂದು ಮುಳುಗಿದ ।
ಭರತಖಂಡದ ಭಾಗ್ಯಚಂದ್ರನು ಮರಳಿ ಮೂಡುವನೇ! ॥ ೬ ॥

ಧರೆಯೊಳಂದಾ ಭೋಜರಾಜನು ।
ವರಕವೀಶ್ವರ ಕಾಳಿದಾಸನೆ ।
ಚರಮಗೀತೆಯ ರಚಿಸುವಂತೆಸಗಿದ ವಿನೋದವನು ॥
ತಿರೆಗೆ ತೋರಿದ ಚಂದ್ರಹಾಸನ ।
ತೆರದೊಳೆಸೆವ ಸುಭಾಸಚಂದ್ರನು ।
ವರ ಶರಚ್ಚಂದ್ರ ಪ್ರಕಾಶದೊಳೊಲಿದು ಬೆಳಗುವನೇ! ॥ ೭ ॥

ಭರತಖಂಡೋದ್ದಂಡ ವಿಜಯಾ ।
ಧ್ವರಕೆ ನಿಜ ತನುಮನವನರ್ಪಿಸಿ ।
ಮರಣಕಂಜದ ವೀರತಿಲಕ ಶಿವಾಜಿ 'ನೇತಾಜಿ' – ॥

ಬರಲಿ – ಲಕ್ಷ್ಮಣನಂತೆ ರಾಜಿಸು ।
ತಿರಲಿ – ನೆಹರೂ ರಾಮನೊಡನಾ ।
ಗುರು ಮಹಾತ್ಮಾ ಗಾಂಧಿ ಗಾಧಿಜನೊಪ್ಪುವಂದದಲಿ ॥ ೮ ॥
ಹಿಂದೆ ಭೀಮಾರ್ಜುನರು ಚಕ್ರಿಯು ।
ಮುಂದೆ ಶೋಭಿಸಿದಂತೆ ಭಾರತ ।
ಬಂಧು ಗಾಂಧಿಯು ಬಲದೊಳಿರಲಿ ಸುಭಾಸನೆಹರುಗಳು ॥
ಮುಂದೆ ಭಾರತದಲಿ ಸ್ವರಾಜ್ಯಾ ।
ನಂದ ಲಭಿಸಲಿ ರಾಮರಾಜ್ಯದ ।
ಚಂದ್ರನುದಿಸಲಿ ಧುರವಿಜಯ ಲಕ್ಷ್ಮೀಶನೊಲ್ಮೆಯಲಿ! ॥ ೯ ॥

[ನವಭಾರತ ೨೯–೯–'೪೬; ಬಡವರಬಂಧು ૩-೧೦–'೪೬; ಬಾಲಚಂದ್ರ ೭೦–೧೦–'೪೬; ಸುಬೋಧ ಅಕ್ಟೋಬರ '೪೬]

[೧೯೪೮]

ಧ್ವಜವಂದನಂ

(ಧಾಟಿ:–ಬೀನಾ ಮಧುರ ಮಧುರ) (೧೫–೮–'೪೭)

ದೇವಾ! ರಕ್ಷಿಸು **ರಾಷ್ಟ್ರಧ್ವಜವ** ॥ ಪ. ॥
ಭಾರತ ಭೂಮಿಗೆ । ವಿಜಯವ ತರುವ ।
ನಾರೀಮಣಿಯರ । ಮಾನವ ಪೊರೆವ ॥
ಧೀರೋದಾತ್ತರ । ಶೌರ್ಯವ ಮೆರೆಸುವ ।
ಭಾರತ–ರಾಷ್ಟ್ರದ– । ನವಧ್ವಜವ— ॥ ೧ ॥
ಶ್ರೀ **ಕೇಸರದ** । **ಕ್ಷೀರದ ಶುಕದ** ।
ಲೋಕ ಮೋಹನ । ವರ್ಣಾಂಬರದ ॥
ವರಾಶೋಕನ । **ಚಕ್ರಾಂ**ಕಿತದ ।
ಚರಕದ–ಚಕ್ರದ–ಗುಡಿಯು–ಸದಾ— ॥ ೨ ॥
ಸುಸ್ವಾ**ತಂತ್ರ್ಯ** । ಕಾಶದೊಳೆಸೆವ ।
ವಿಶ್ವಶಾಂತಿ ಸಂ । ಪದದಲಿ ನಲಿವ ॥
ಗಾಂಧಿ, ನೆಹರು ಭಾ । **ರತ** ವಂದಿಸುವ ।
ಭೂಧ್ವಜ–ಕೀವು**ದು–ಮಂಗಲವ**— ॥ ૩ ॥

['ಪ್ರಭಾತ'–ಸ್ವಾತಂತ್ರ್ಯೋತ್ಸವ ಸಂಚಿಕೆ–೧೯೪೭.]

ಸ್ವಾತಂತ್ರ್ಯೋತ್ಸವದ ಕಾಣಿಕೆ:

೧. ನವಧ್ವಜಾರೋಹಣಂ

(೧೫-೮-೪೭.)

ಧಾಟಿ:-(ಕದಂ ಕದಂ ಬಡಾಯುಜ) ಅಥವಾ (ಭಾರತಾಂಬೆ ನಮ್ಮ ಮಾತೆ)

ಸ್ವತಂತ್ರಭಾರತಧ್ವಜಂ । ಪ್ರಜಾನುರಂಜನಧ್ವಜಂ ॥ ಪ ॥
ಕುತಂತ್ರ ರಾಜ್ಯಭಾರದಪರ । ಹೃದಯ ಕಂಪನಧ್ವಜಂ ॥ ಅ. ಪ. ॥

ಪರರು ನಮ್ಮ ಜನರ ಬಡಿದು, । ಸೆರೆಯ ಮನೆಗೆ ಸೆಳೆದರೂ– ॥
ಕರವ ಮುರಿದು, ಕಾಲ ಕಡಿದು, । ಕೋವಿಯಿಂದ ಹೊಡೆದರೂ– ॥ ೧ ॥

ನೋವಿಗಾಗಿ ಕೂಗುತಿರದೆ । ಸಾವಿಗಾಗಿ ಬೆದರದೆ– ॥
ಜೀವದಾಸೆ ತೊರೆದು ನಾಡ । ಗುಡಿಯ ಕಾವ ಸಮರದೆ- ॥ ೨ ॥

ಪ್ರಾಣವಿರುವ ವರೆಗೆ ಧರಾ । ಧ್ವಜವ-ಹಿಡಿದು ಬೀಳಲು– ॥
ಮಾನದಿಂದಲದನು ಸ್ವಜನ । ಹಸ್ತಕಿತ್ತು-ಸಾಯಲು- ॥ ೩ ॥

ಮುಂದೆ ಬಂದ ರಾಷ್ಟ್ರವೀರ । ರಾತ್ಮಗೌರವಧ್ವಜಂ– ॥
ಇಂದು ಹಾರುತಿದೆ ಸ್ವತಂತ್ರ । ಭಾರತಾವನೀಧ್ವಜಂ. ॥ ೪ ॥

○ ○ ○ ○

ಕೇಸರ ಪ್ರಕಾಶ ವಜ್ರ । **ಮರಕತ**—ತ್ರಿವರ್ಣದ ॥
ಭಾಸುರಾಂಬರ ಪ್ರಸನ್ನ । **ನೀಲಚಕ್ರ** ಮಧ್ಯದ ॥ ೫ ॥

ಶೋಕಹರಾ **ಶೋಕ ಚಕ್ರ** । **ಗಾಂಧಿ ಚರಕ ಚಕ್ರ**ದ ॥
ಲೋಕಮಾನ್ಯ ಸೂರ್ಯಚಕ್ರ । ಕಾಲಚಕ್ರ ನೋಟದ ॥ ೬ ॥

ಮೋತಿ**ಲಾಲ ಬಾಲ**ನೊಲಿದ । ಭಾರತದ **ಸುದರ್ಶನ** ॥
ದ್ಯೋತಕ ಪ್ರಚಂಡ ಚಕ್ರ । ಭದ್ರ ರಾಷ್ಟ್ರಕೇತನ ॥ ೭ ॥

ವಿಶ್ವದೈಕ್ಯ, ಸಖ್ಯ, ಶಾಂತಿ । ಗಳ ಸಿಸಾಸಿ ಹಾರಲಿ! ॥
ವಿಶ್ವಭಾರತೀ **ಸ್ವತಂತ್ರ** । **ಧ್ವಜಂ**-ಜಗದೊಳೆಸೆಯಲಿ! ॥ ೮ ॥

ಧನ್ಯ ಧ್ರುವಜ್ಯೋತಿಯಂತೆ । ಜಯಪತಾಕೆ ಬೆಳಗಲಿ! ॥
ಪುಣ್ಯಧರಣಿಯಲಿ **ಸ್ವರಾಜ್ಯ** । ವಿಜಯಭೇರಿ ಮೊಳಗಲಿ! ॥ ೯ ॥

['ನವಯುಗ'–'ಪ್ರಭಾತ'–ಸ್ವಾತಂತ್ರ್ಯೋತ್ಸವ ಸಂಚಿಕೆ ೧೯೪೭.]




ಶಕ ಪುರುಷ
ಮಹಾತ್ಮಾ ಗಾಂಧಿ
ಜನನ: 2-10-1869



ಗಡಿನಾಡ ಗಾಂಧಿಯೊಡನೆ
ಜವಾಹರಲಾಲ ನೆಹರು



ರಾಷ್ಟ್ರಪತಿ ರಾಜೇಂದ್ರ ಪ್ರಸಾದ
ಜನನ: 3–12–1884



ಸರದಾರ ಪಟೇಲ

೨. ನವಭಾರತಗೀತೆ

(ಸ್ವಾತಂತ್ರ್ಯೋತ್ಸವ ೧೫–೮–೧೯೪೭)

~~ಧಾಟಿ:–(ಗಾಂಧಿ ದೀರ್ಘಾಯುರಾರೋಗ್ಯದಿಂದಿರಲಿ!)~~

ಮೆರೆಯಲಿ **ಸ್ವತಂತ್ರಭಾರತವು** ಕೀರ್ತಿಯಲಿ! ॥ ಪ ॥

ಧರೆಯಲಿ ಸ್ವರಾಜ್ಯ ಸಾಮ್ರಾಜ್ಯ ರಾಜಿಸಲಿ! ॥ ಅ. ಪ. ॥

ಕಳೆದೆರಡು ಶತಮಾನ ಕಾಲ ಪರತಂತ್ರದಲಿ ।
ಸಿಲುಕಿರ್ದು ಸ್ವಾತಂತ್ರ್ಯ ಶೂನ್ಯ ಭಾವದಲಿ ॥
ಬಳಲಿರುವ ಭಾರತಾಂಬೆಯು ಬಂಧನವ ಬಿಡಿಸಿ ।
ನಲಿವ ಮಕ್ಕಳ ಮನೋಭೀಷ್ಟವನು ಸಲಿಸಿ ॥ ೧ ॥

ಮಾತೃಭೂಮಿಯು ವಿಜಯಕಾಗಿ ಭಾರತವೀರ ।
ಭ್ರಾತೃಭಗಿನಿಯರನೇಕರು ರಾಷ್ಟ್ರ ಸಮರ ॥
ನೇತೃತ್ವದಲಿ ನಿಂದು ತಮ್ಮ ಸರ್ವವ ತೊರೆದು ।
ಮಾತೃಭೂಮಿಗೆ ಜಯವ ತಂದಿರುವರಿಂದು ॥ ೨ ॥

ಮೊದಲಾಗಿ '**ಹಿಂದೀ ಸಿಪಾಯಿಗಳ ದಂಗೆ**'ಯಾ । ೧೦-೫-೧೮೫೭
ದುದು ಬಳಿಕ ಜನಿಸಿದಾ '**ರಾಷ್ಟ್ರೀಯ ಸಭೆ**'ಯು ॥ ೨೮-೧೨-೧೮೮೫
ವಿಧವಿಧದ ಚಳವಳದ '**ಬಲಿ**'ಯಿಂದ ಸ್ವಾತಂತ್ರ್ಯ ।
ವದು ದೊರಕಿತಿನ್ನಿಲ್ಲವಾ ಪಾರತಂತ್ರ್ಯ ॥ ೩ ॥

ಆ ಸಮುದ್ರವ ಮಥಿಸಿ ದೊರೆತಮೃತಕಾಗಿ ದೇ ।
ವಾಸುರರು ಸ್ನೆದಂತೆ ವಾದಕೆಡೆಗೊಡದೆ ॥
ದೇಶದೊಳ್ ಹಿಂದೂ ಮುಸಲ್ಮಾನರೊಲವಿನಲಿ ।
ತೋಷದಿಂ ಸ್ವಾತಂತ್ರ್ಯ ಸುಧೆಯ ಸವಿದಿರಲಿ ॥ ೪ ॥

○ ○ ○ ○

ಧೀರ **ನವರೋಜಿ, ಗೋಖಲೆ, ತಿಲಕ, ಲಾಲಾ**ದಿ ।
ಭಾರತಾಗ್ರಜರೆಳೆದ ಘನರಥವ **ಗಾಂಧಿ** ॥
ಶೂರ ಸಾರಥಿಯಾಗಿ ನಡೆಸಲು **ಜವಾಹರ**ನು ।
ಭಾರತದ **ವಿಜಯ**ನೊಲ್ ಜಯವಗಳಿಸಿದನು ॥ ೫ ॥

ಚಿತ್ತರಂಜನ, ಸೇನಗುಪ್ತ, ನೇತಾಜಿಯರ ।
ಮತ್ತಾ ಭಗತ್ಸಿಂಗ, ರಾಜಗುರು, ಶುಕರ ॥
ನೆತ್ತರನು ಭಾರತಾಧ್ವರಕೆರೆದ ಸರ್ವರಾ ।
ಚಿತ್ತಕ್ಕೆ ಶಾಂತಿಯಾಗಲಿ ರಾಷ್ಟ್ರಭಟರ ॥ ೬ ॥

ಮಾಲವೀಯ, ಪಟೇಲ, ಮೋತಿಲಾಲ, ಸುರೇಂದ್ರ, ।
ಪಾಲ, ಕಸ್ತೂರಿ, ಸುಕವೀಂದ್ರಾ ರವೀಂದ್ರ, ॥
ಮೇಲಾದ ರಾಜಯೋಗಿಗಳ ಸಂಕಲ್ಪದಾ ।
ಭೂಲೋಲ ಸ್ವಾತಂತ್ರ್ಯ ಲಭಿಸಿತಾನಂದ ॥ ೭ ॥

ಲಲಿತ ಮರಕತ, ವಿಮಲ ವಜ್ರ, ನವ ಕೇಸರದ ।
ಕಳೆಯ ಮಧ್ಯದೊಳಶೋಕನ ಚಕ್ರಸಿದ್ಧ ॥
ಕಲಿ ಮಹಾತ್ಮನ ಚರಕ ಚಕ್ರ ನೀಲಾಂಕಿತದ ।
ಚೆಲುವಿನ ಸ್ವತಂತ್ರ ಭಾರತದ ಗುಡಿಯಿಂದ ॥ ೮ ॥

ಪಾರತಂತ್ರ್ಯವು ಹೋಯ್ತು! ಸ್ವಾತಂತ್ರ್ಯವೇ ಬಂತು! ।
ಭಾರತಾಂಬೆಯ 'ದುಃಖ' ಶಾಂತಿಗೆಡೆಯಾಯ್ತು! ॥
ವೀರ ಗಾಂಧಿಮಹಾತ್ಮನಾತ್ಮಬಲ ಶೋಭಿಸಿತು! ।
ಭಾರತೀ ವಿಜಯಲಕ್ಷ್ಮೀಶ ಜಯ ಜಯತು! ॥ ೯ ॥

॥ ಜೈ ಹಿಂದ್! ವಂದೇ ಮಾತರಂ ॥

['ಪ್ರಭಾತ' ಸ್ವಾತಂತ್ರ್ಯೋತ್ಸವ ಸಂಚಿಕೆ, 'ಮದ್ರಾಸು ಸಮಾಚಾರ' ೧೯೪೭.]

ಜಯಂತಿಗೀತೆ

ಧಾಟಿ:-(ಭಾಗ್ಯದ ಲಕ್ಷ್ಮಿ ಬಾರಮ್ಮ) ರಾಗ:-(ಮಧ್ಯಮಾವತಿ-ಆದಿತಾಳ)

ಗಾಂಧಿ-ದೀರ್ಘಾಯುವಾಗಿರಲಿ ।
ಪ್ರಪಂಚ ಪೂಜ್ಯ ॥ ಪ ॥

ಮಾನ್ಯ ದಿವಾನ ಕರಮಚಂದನ ।
ಪುಣ್ಯಸತೀಮಣಿ ಲಕ್ಷ್ಮೀಸುತನು ॥
ಧನ್ಯ ಮಹಾತ್ಮಾ ಮೋಹನದಾಸನ ।
ಪುಣ್ಯಧರಣಿಯಲಿ ಪೊರೆಯಲಿ ಶರಣ! ॥ ೧ ॥

ಶ್ರೀ **ಕಸ್ತೂರಿ** ಸುಮಂಗಲನಾಗಿ ।
ಲೋಕಮಾನ್ಯ ನೆಹರು ಪ್ರಿಯನಾಗಿ ॥
ಶ್ರೀಕರ **ಭಾರತ** ಧಾರಿಣಿಗಾಗಿ ।
ಲೋಕವೆ ಬೆಳಗುವ **ರಾಷ್ಟ್ರಯೋಗಿ** ॥ ೨ ॥

ಸತ್ಯಾಶ್ರಯ **ಬುದ್ಧ**ನವೋಲ್ ನಡೆದು ।
ನಿತ್ಯಾಹಿಂಸಾ ವ್ರತ ಪಥ ಹಿಡಿದು ॥
ಸತ್ಯ, ಶಾಂತಿ ಸಂದೇಶವನೊರೆದು ।
ನಿತ್ಯಾತ್ಮನ '**ಕರೆ**'ಗೊಪ್ಪುವ ಸಾಧು ॥ ೩ ॥

ಧರೆಯ ಸೇವೆಯಲಿ ತನುವನು ಸವೆಸಿ ।
ಹರಿಜನ ದೀನಾರ್ತರನುದ್ಧರಿಸಿ ॥
ಭರತ ಭುವಿಗೆ **ಸ್ವಾತಂತ್ರ್ಯ**ವ ಕೊಡಿಸಿ ।
ಮೆರೆವ **ರಾಷ್ಟ್ರಜನಕಾ-ರಾಜರ್ಷಿ** ॥ ೪ ॥

ಸರ್ವರ **ಸಮತಾ**ಭಾವದೆ ಕೂಡಿ ।
ಸರ್ವ ಜಗದ ಕಲ್ಯಾಣವ ನೋಡಿ ॥
ಉರ್ವಿಯೊಳವತರಿಸಿದ **ಶಕಪುರುಷ**ನ ।
ಸರ್ವೇಶನು ಸಲಹಲಿ **ಶ್ರೀರಮಣಾ!** ॥ ೫ ॥

[~~ನವಯುಗ, ಪ್ರಪಂಚ, ಸುಬೋಧ~~ [೧೯೪೭]

೧

(ಧಾಟಿ: 'ಬ್ರೂಹಿ ಮುಕುಂದೇತಿ')

ಗಾಂಧಿ—ಮಹಾತ್ಮಾಜಿ । ಜಯತು ॥ ಪ. ॥
ಭಾಸುರ ಭಾರತ । ಸುತ—ಗಾಂಧೀಜಿ ।
ಭೂ '**ಸ್ವಾತಂತ್ರ್ಯ ಪಿತಾ**' । ಬಾಪೂಜಿ ॥ ೧ ॥
ಪ್ರಿಯ **ಕಸ್ತೂರೀ** । ಹಿತ—ಗಾಂಧೀಜಿ ।
ಜಯ **ನೆಹರೂ**ವಿನುತಾ— । ಬಾಪೂಜಿ ॥ ೨ ॥
ಸತ್ಯಾಗ್ರಹಿ ಮೋ । ಹನ—ಗಾಂಧೀಜಿ ।
ನಿತ್ಯಾಹಿಂಸ ಧನಾ । ಬಾಪೂಜಿ ॥ ೩ ॥
ದೇಶೋದ್ಧಾರಕ । ಶ್ರೀ ಗಾಂಧೀಜಿ ।
ಶ್ರೀಶನು ರಕ್ಷಿಸಲಿ । ಬಾಪೂಜಿ ॥ ೪ ॥

[ನವಯುಗ ೧೯೪೭]

ಮಹಾಕರ್ಣಾಟ ಗಾನ

[ಏಕೀಕರಣ ಘೋಷ.]

ಧಾಟಿ: (ಪ್ರಿಯ–ಭಾರತ । ಮಾನ್ಯ ಸ್ವ । ದೇಶೀ ಪ್ರ । ಚಾರಕ)

ಅಥವಾ

(ಏನಿದ್ದರೇನಾಯ್ತು । ಮನದ ಮಂದಿರದಲ್ಲಿ)

ಅಥವಾ

(ಉದಯರಾಗದಂತೆಯೂ ಹಾಡಬಹುದು.)

ಕನ್ನಡ । ನಾಡಿದು । ಭಾರತಾಂ । ಬೆಯ ಮುದ್ದು ।
'ರನ್ನ'ಗ । ನ್ನಡಿಯಂತೆ । ಬೆಳಗಲಿದು ॥ ಪ. ॥
ಭಿನ್ನ ಭಿ । ನ್ನಗಳಾಗಿ । ಬಿರಿದು ಬಿ । ದ್ದಿರುವುದು ।
ಕನ್ನಡಿ । ಗರದು ಕ । ನ್ನಡ ನಾಡಿದು ॥ ಅ. ಪ. ॥ ಪ್ರಿಯ

ಕಾವೇರಿ । ಯಿಂದ ಗೋ । ದಾವರಿ । ವರೆಗಿನ ।
ಭೂವಲ । ಯವದು 'ಕ । ನ್ನಡ ನಾಡೆ'ಂದು ॥
ಪೂರ್ವೇತಿ । ಹಾಸ ಸಿ । ದ್ಧಾಂತವಾ । ಗಿರುವುದು ।
'ದೇವಿ'ಯ । ಕೃಪೆಯ ಕ । ನ್ನಡ ನಾಡಿದು ॥ ೧ ॥ ಪ್ರಿಯ

ಆ ರಾಷ್ಟ್ರ । ಕೂಟ, ಕ । ದಂಬ, ಹೊ । ಯ್ಸಳ, ಗಂಗ, ।
ಧೀರ ಚಾ । ಲುಕ್ಯ, ವಿ । ಜಯ, ರಾಯರ ॥
ಭಾರತ । ಮಾನ್ಯ ಮ । ಹೀಶೂರ । ರೊಡೆಯರ ।
ಧಾರಿಣಿ । 'ನಮ್ಮ' ಕ । ನ್ನಡ ನಾಡಿದು ॥ ೨ ॥ ಪ್ರಿಯ

ಪುಲಿಕೇಶಿ, । ನೃಪತುಂಗ, । ಕೃಷ್ಣ, ವಿ । ಕ್ರಮ ದೇವ, ।
'ಬಲ'ದ 'ಭಕ್ತಿ'ಯ ಪುರಂ । ದರ, । ಕನಕ, ॥
ಕಲಿ ಪಂಪ, । ಕಂತಿ, ಮು । ದ್ದಣ, ರನ್ನ, । ಜಕಣರ ।
ಸುಲಲಿತ । 'ಕಲೆ'ಯ ಕ । ನ್ನಡ ನಾಡಿದು ॥ ೩ ॥ ಪ್ರಿಯ

ಮಧ್ವ, ಶಂ । ಕರ, ರಾಮಾ । ನುಜ, ಬಸ। ವೇಶ್ವರ, ।
ಬುದ್ಧ, ಶ । ರಣ ಭದ್ರ । ಜಿನ 'ಮತ'ದ ॥
ಉದ್ಭಾವ । ವಿಜ್ಞಾನೇ । ಶ್ವರ, ವಿದ್ಯಾ । ರಣ್ಯರ ।
ಸಿದ್ಧ ,ತ । ತ್ವ'ಗಳ ಕ। ನ್ನಡ ನಾಡಿದು ॥ ೪ ॥ ಪ್ರಿಯ

ಬೇಲೂರು। ಹಳೆಬೀಡು, । ವೇರೂಲು, । ಬೆಳಗುಳ ।
ಗುಲ್ಬರ್ಗ, । ಕದಿರೆ, ಬಿ । ದಿರೆ, ಕಾರ್ಕಳ ॥
ಲೀಲಾ । ಲಾರ್ಯ ದ್ರಾ । ವಿಡ ಸಂ ಸ್ಕೃತಿಯ ಪೂರ್ವ ।
ಕಾಲ 'ಧ । ರ್ಮ'ಗಳ ಕ । ನ್ನಡ ನಾಡಿದು ॥ ೫ ॥ ಪ್ರಿಯ

ಗೆರಸಪ್ಪೆ, । ಪೈಕಾರ, । ಶಿವಸಮು । ದ್ರಾಂಚಾಲಿ, ।
ಸಿರಿ ಕೃಷ್ಣೆ, । ಭದ್ರೆ, ಭೀ । ಮೆಯರಿಂದಲಿ ॥
ಶರಧಿ ಗಾಂ । ಭೀರ್ಯದ । ಪ್ರಕೃತಿ ಸೌಂ । ದರ್ಯದ ।
ಸರಸದ । 'ಮಳೆ'ಯ ಕ । ನ್ನಡ ನಾಡಿದು ॥ ೬ ॥ ಪ್ರಿಯ

ಕೋಲಾರ । 'ಕಪ್ಪದ । ಗುಡ್ಡ'ದ । ಚಿನ್ನದ ।
ಮೂಲ ಸ । ಹ್ಯಾದ್ರಿಯ । ಕಬ್ಬಿಣದ ॥
ಶ್ರೀಲತಾ. । ಸುಮ, ಫಲ । ಚಂದನ । ವನಗಳ ।
ಸಾಲಿನ । 'ಬೆಳೆ'ಯ ಕ। ನ್ನಡ ನಾಡಿದು ॥ ೭ ॥ ಪ್ರಿಯ

ಭತ್ತ, ತೆಂ । ಗಡಕೆ, ಮೆ । ಣಸು, ಕಾಫಿ, ಯಾಲಕ್ಕಿ, ।
ಹತ್ತಿ, ಗೆ । ಣಸು, ಕಬ್ಬು, । ಜೋಳ, । ರಾಗಿ ॥
ಮತ್ತ ಮ । ಹಾವೀರ । ಸತಿ ಗಲ್ಲು, ಶಾಸನ, ।
'ಚಿತ್ರ' ಭಿ । ತ್ತಿಗಳ ಕ। ನ್ನಡ ನಾಡಿದು ॥ ೮ ॥ ಪ್ರಿಯ

'ಗೋ'ಕುಲ, । ಸಾರಂಗ, । ಮಾತಂಗ, । ಶುಕ, ಪಿಕ ।
ಗೋಕರ್ಣ, । ಶೃಂಗೇರಿ, । ರಜತ ಪೀಠ ।
ಶ್ರೀ 'ಕರ್ಣಾ । ಟಕ ಸಂಗೀ । ತಾ' ನಂದ । ಲಹರಿಯ ।
ಸಾಕವೆ । 'ಸಮ್ಮ' ಕ। ನ್ನಡ ನಾಡಿದು ॥ ೯ ॥ ಪ್ರಿಯ

ಬೆಟ್ಟದ । 'ಬಲ', ಮುಂಡಾ । ಸಿಲ ಕಡ । ಲಿನ 'ಜಲ', ।
ಭಟ್ಕಳ । ಕಾರ್ವಾರ, । ಮಂಗಳೂರು ॥

ಶ್ರೇಷ್ಠ 'ಬಂ । ದರ'ದ 'ಸ್ವ । ತಂತ್ರ ಭಾ ।ರತ' ಹಿತ ।
ದೃಷ್ಟಿಯ । ನೆಲೆಯು ಕ । ನ್ನಡ ನಾಡಿದು ॥ ೧೦ ॥ ಪ್ರಿಯ

ಮದರಾಸು, । ಮೈಸೂರು, । ಕೊಡಗು, ಮುಂ। 'ಬಾಯಿ'ಯ।
ಬದಿಗಾಗಿ । ಹೈದರಾ। ಬಾದಿನಲಿ ॥
ಚದರಿದ । ಕರ್ಣಾಟ । 'ಭಾಷಾ । ನ್ವಯ ಪ್ರಾಂತ'
ಪದವಿಗ । ಹರ್ತೆಯು । ಕ ನ್ನಡ ನಾಡಿದು ॥ ೧೧ ॥ ಜಯ

ಭೂಲೋಲ । ಸ್ಥಿತಿ, । ಗತಿ, । 'ಸಂಪದ'ದಲಿ ತನ್ನ ।
ಕಾಲೊಳೆ । ತಾನು ನಿಲ್ಲುವ ಶಕ್ತಿಯ ॥
ಮೇಲಾಗ । ಲಿರುವ ' ಮ । ಹಾ ಕರ್ಣಾ । ಟಕ' ಜಯು ।
ಶ್ರೀ ಲಕ್ಷ್ಮೀ । ಶನದು ಕ । ನ್ನಡ ನಾಡಿದು ॥ ೧೨ ॥ ಜಯ

[~~ಪ್ರಭಾತ, ಬಾಲಚಂದ್ರ, ಜಯಕರ್ಣಾಟಕ, ಸುಬೋಧ~~ [೧೯೪೭.]

ಜಯಗೀತೆ

(ಕೃಷ್ಣಲೀಲೆ)

ಜಯ ಮಧ್ವಾಚಾರ್ಯಪ್ರಸನ್ನ ಶ್ರೀಕೃಷ್ಣ ।
ಜಯ ಜಯ ರಜತಪೀಠಾಸೀನ ಕೃಷ್ಣ ॥
ಜಯ ಚಂದ್ರಮೌಳೀಶ ದರ್ಶನ ಕೃಷ್ಣ ।
ಜಯ ಜಯ ಕನಕಸುದರ್ಶನ ಕೃಷ್ಣ ॥ ಜೋ ಜೋ ॥ ೧ ॥

ಜಯ ದೇವಕೀಪುತ್ರ ಪ್ರಿಯಬಾಲ ಕೃಷ್ಣ ।
ಜಯ ಜಯ ವಸುದೇವಾಲಯಲೋಲ ಕೃಷ್ಣ ॥
ಜಯ ಬಲರಾಮ ಸಹೋದರ ಕೃಷ್ಣ ।
ಜಯ ಜಯ ಗೋಪೀಮನೋಹರ ಕೃಷ್ಣ ॥ ಜೋ ಜೋ ॥ ೨ ॥

ಜಯ ಮಾಯಪೂತನೀ ಸಂಹಾರಕೃಷ್ಣ ।
ಜಯ ಜಯ ಗೋವರ್ಧನೋದ್ಧಾರ ಕೃಷ್ಣ ॥

ಜಯ ಘೋರಕಂಸವಿಧ್ವಂಸನ ಕೃಷ್ಣ ।
ಜಯ ಜಯ ಭಾಮಾರುಕ್ಮಿಣೀಪ್ರಾಣ ಕೃಷ್ಣ ॥ ಜೋ ಜೋ ॥ ೩ ॥

ಜಯ ಕೌರವಾನ್ವಯನಾಶನ ಕೃಷ್ಣ ।
ಜಯ ಜಯ ಪಾಂಡವಪೋಷಣ ಕೃಷ್ಣ ॥
ಜಯ ಭಾರತಾನಂದಕಾರಣ ಕೃಷ್ಣ ।
ಜಯ ಜಯ ಭೂಭಾರ ಹರಣ ಶ್ರೀಕೃಷ್ಣ ॥ ಜೋ ಜೋ ॥ ೪ ॥

ಜಯ ಭವಲೀಲಾಪ್ರದರ್ಶನ ಕೃಷ್ಣ ।
ಜಯ ಜಯ ಶರಣಜನಾಧೀನ ಕೃಷ್ಣ ॥
ಜಯ ವಿಶ್ವಮಾಯಾ ಜಗನ್ಮಯ ಕೃಷ್ಣ ।
ಜಯ ಜಯ ಪತಿತಪಾವನಪ್ರಿಯ ಕೃಷ್ಣ ॥ ಜೋ ಜೋ ॥ ೫ ।

ಜಯ ಘನಶ್ಯಾಮಲಕೋಮಲ ಕೃಷ್ಣ ।
ಜಯ ಜಯ ಕೌಸ್ತುಭವನಮಾಲ ಕೃಷ್ಣ ॥
ಜಯ ಶಂಖ ಚಕ್ರ ಗದಾಧರ ಕೃಷ್ಣ ।
ಜಯ ಜಯ ಪದ್ಮಶುಭಂಕರ ಕೃಷ್ಣ ॥ ಜೋ ಜೋ ॥ ೬ ।

ಜಯ ಪೀತಾಂಬರಧರ ಬಂಧುರ ಕೃಷ್ಣ ।
ಜಯ ಜಯ ದ್ವಾರಕಾಪುರವರ ಕೃಷ್ಣ ॥
ಜಯ ಗೀತಾನಂದನ ಗೋಪಾಲ ಕೃಷ್ಣ ।
ಜಯ ಜಯ ಜಯ **ಲಕ್ಷ್ಮೀ ಮಂಗಲ** ಕೃಷ್ಣ ॥ ಜೋ ಜೋ ॥ ೭ ।

ಜೈ ಹಿಂದ್! ವಂದೇ ಮಾತರಂ!



ಸುಬೋಧ (ಹೊಸಪೇಟೆ) ಬಳ್ಳಾರಿ:-

"ಲೀಲೆ"

ಇದು ಶ್ರೀಯುತ ಲಕ್ಷ್ಮೀನಾರಾಯಣ ಪುಣಿಂಚತ್ತಾಯರಿಂದ ರಚಿತವಾದೊಂದು ಪುಟ್ಟ ಪುಸ್ತಕವು.

ಎಮ್. ಅನಂತ ಶಾಸ್ತ್ರಿಗಳವರ ಆಂಗ್ಲೇಯ ಮುನ್ನುಡಿಯಿಂದ ಪ್ರಸಿದ್ಧವಾಗಿರುವುದು.

''ಮಾಯಾಲೀಲೆ'' ''ಭವಲೀಲೆ''

ಮತ್ತು

''ದಾನಲೀಲೆ''

ಈ ಪ್ರಕಾರ ಅಪಾರ ಮಹಿಮನಾದ ಶ್ರೀ ಪರಮಾತ್ಮನ ಲೀಲೆಯನ್ನು ವರ್ಣಿಸುವ ಕಿವಿಗಿಂಪಾದ ತಿಳಿಗನ್ನಡದ ಹಾಡುಗಳು.

ಸುಪ್ರಸಿದ್ಧ

ಕಬೀರ, ಕನಕ, ಪುರಂದರಾದಿಗಳ

ರಮಣೀಯವಾದ ಪದಗಳನ್ನು ಅನುಕರಿಸಿರುವವು.

ಪುಣಿಂಚತ್ತಾಯರ ಪದಲಾಲಿತ್ಯವತಿಪ್ರಶಂಸನೀಯವಾಗಿರುವುದು.

ನೂತನವಾದ ಈ ಕನ್ನಡ ಕೋಗಿಲೆಯ ಸುಶ್ರಾವ್ಯವಾದ ಸಂಗೀತವು ಕರ್ಣಾಟಕೋದ್ಯಾನದಲ್ಲೆಲ್ಲೆಲ್ಲಿಯೂ ಹಬ್ಬುತ್ತಿರುವಂತೆ ಅನುಗ್ರಹಿಸಲೆಂದು ಶ್ರೀ ಗೋವಿಂದನ ಪಾದಾರವಿಂದಗಳಲ್ಲಿ ಒಂದು ಬಿನ್ನಹವನ್ನು ಸಮರ್ಪಿಸುತ್ತೇವೆ.

ಶ್ರೀ. ಪುಣಿಂಚತ್ತಾಯರ

'ಜಯಗೀತೆ' 'ವಿರಲವಿಯೋಗ' 'ಹರಿಜನಸಂಧಾನ'

– ಇತ್ಯಾದಿ –

★

ಪ್ರಾಕ್ತನವಿಮರ್ಶವಿಚಕ್ಷಣ—ಕರ್ಣಾಟಕ ಪ್ರಾಚ್ಯವಿದ್ಯಾವೈಭವ—ಮಹಾಮಹೋಪಾಧ್ಯಾಯ—ರಾವ್ ಬಹದ್ದೂರ್ ಆರ್. **ನರಸಿಂಹಾಚಾರ್ಯ,** ಎಮ್. ಎ., ಎಮ್. ಆರ್. ಎಸ್., ಇವರ ಅಭಿಪ್ರಾಯ: —

"......ತಮ್ಮಿಂದ ರಚಿತವಾದ **ಜಯಗೀತೆ, ವಿರಲವಿಯೋಗ** ಮುಂತಾದ ಕವಿತೆಗಳನ್ನು ಆಗಾಗ್ಗೆ ಓದಿ ಸಂತೋಷಪಟ್ಟೆನು. ... **ತಾವು ಬರೆದಿರುವ ಗ್ರಂಥಗಳೆಲ್ಲಾ ತಮ್ಮ ಭಾಷಾಪ್ರೀತಿ ದೇಶಪ್ರೀತಿಗಳನ್ನು ವ್ಯಕ್ತಗೊಳಿಸುತ್ತವೆ.** ...ಪ್ರಕೃತದಲ್ಲಿ ತಾವು ಬರೆದಿರುವ **ಹರಿಜನಸಂಧಾನವನ್ನೂ** ಓದಿ ಸಂತೋಷಪಟ್ಟೆನು. **ಇದರಿಂದ ತಮ್ಮ ಹೃದಯದ ಆರ್ದ್ರತೆಯೂ ದೀನದಯಾಳುತ್ವವೂ ಒಡೆದು ಮೂಡಿ ತೋರುತ್ತವೆ.** ಹರಿಜನೋದ್ಧಾರವು ಹಿಂದುಗಳ ಕರ್ತವ್ಯವೆಂಬುದರಲ್ಲಿ ಯಾವ ಸಂದೇಹವೂ ಇಲ್ಲ. ಕ್ರಮಕ್ರಮವಾಗಿ ಈ ಜನರನ್ನು ಮೇಲಕ್ಕೆ ತರುವುದು ಅವಶ್ಯಕ. ದೇವಾಲಯ ಪ್ರವೇಶದ ವಿಷಯದಲ್ಲಿ ಮಾತ್ರ ಭಿನ್ನಾಭಿಪ್ರಾಯಗಳಿವೆ. ... ಮಿಕ್ಕ ವಿಷಯಗಳಲ್ಲೆಲ್ಲಾ ಅಭಿಪ್ರಾಯವು ಏಕಮುಖವಾಗಿಯೇ ಇರುವುದರಿಂದ ಯಾವ ವಿಧವಾದ ತೊಂದರೆಗೂ ಅವಕಾಶವಿಲ್ಲ.

"ತಾವು ಮಾಡುತ್ತಿರುವ ಕೆಲಸವು ಸ್ತುತ್ಯವಾಗಿಯೂ ಶ್ಲಾಘನೀಯವಾಗಿಯೂ ಇದೆ ......"

ಕಾರಣಮಾರ್ಗದರ್ಶಿ

ಶ್ರೀ. ಪುಣಿಂಚತ್ತಾಯರ

"ಸ್ವಾತಂತ್ರ್ಯೋತ್ಸವದ ಕಾಣಿಕೆ"

ಶ್ರೀ. ಮುದವೀಡು ಕೃಷ್ಣರಾಯರು ಬರೆಯುತ್ತಾರೆ :—

ಶ್ರೀಯುತ ಪುಂಡೂರು ಲಕ್ಷ್ಮೀನಾರಾಯಣ ಪುಣಿಂಚತ್ತಾಯರು,
ಕಾಸರಗೋಡು. ಇವರಿಗೆ.

॥ ಸಿರಿಗನ್ನಡಂಗೆಲ್ಗೆ ॥

ಪ್ರಿಯ ಮಿತ್ರರೆ, ಧಾರವಾಡ, ೧೨-೮-'೪೭.

ನೀವು ಪ್ರೀತಿಯಿಂದ ಕಳಿಸಿದ "ಸ್ವಾತಂತ್ರ್ಯೋತ್ಸವದ ಕಾಣಿಕೆ"ಯ ಎರಡು ಪ್ರತಿಗಳು ಮುಟ್ಟಿದವು. "ಧ್ವಜಾರೋಹಣಗೀತೆ"ಯೂ "ನವಭಾರತಗೀತೆ"ಯೂ ನಮ್ಮ ಸ್ವಾತಂತ್ರ್ಯ ಸಮರದ ಸಮಗ್ರ ಇತಿಹಾಸಚಿತ್ರವನ್ನು ಕಣ್ಣೆದುರು ತಂದು ನಿಲ್ಲಿಸುವ ಪ್ರಭಾವಶಾಲಿಯಾದ ಸುಂದರವಾದ ಅಂತಃಕರಣವನ್ನು ಹೊಯ್ದಾಡಿಸಿ ಬಿಡುವ ಮನೋಹರ ಕಾವ್ಯಗಳಾಗಿವೆ. ಇವುಗಳಿಗಾಗಿ ನಿಮಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು. ನನ್ನ ಮಕ್ಕಳು, ಮೊಮ್ಮಕ್ಕಳು ಕೂಡಿ ಇವುಗಳನ್ನು ಇಲ್ಲಿ ಸ್ವಾತಂತ್ರ್ಯೋತ್ಸವದ ವಿವಿಧ ಕಾರ್ಯಕ್ರಮಗಳಲ್ಲಿ ಸಾಭಿನಯ ಅನ್ನತಕ್ಕವರಿದ್ದಾರೆ.

ನಾನು ನಿಮ್ಮನ್ನು ಮೊದಲು ಸಾರೆ ಕಂಡದ್ದು ೧೯೨೮ರ ಉಡುಪಿಯ ಪರಿಷತ್ತಿನ ಕಾಲಕ್ಕೆಂದು ನೆನೆಪಿಗೆ ಬರುತ್ತದೆ. ...... ಈ ದೀರ್ಘಕಾಲದಲ್ಲಿಯೂ ನೀವು ನನ್ನನ್ನು ಮರೆಯದೆ ನನಗೆ ನಿಮ್ಮ ಕೃತಿಗಳ ಕಾಣಿಕೆಗಳನ್ನು ಕಳುಹಿಸಿದ್ದಕ್ಕಾಗಿ ಮತ್ತೊಮ್ಮೆ ನಿಮ್ಮನ್ನು ಅಭಿನಂದಿಸುತ್ತೇನೆ. ನಿಮ್ಮ ಕವಿತ್ವ ಶಕ್ತಿಯು ಇನ್ನೂ ಹಣ್ಣಾಗಿ ಮಾಗಿ ಭಾರತಕ್ಕೂ ಕನ್ನಾಡಿಗೂ ಶ್ರೇಯಸ್ಸು ತರುವಂತಾಗಲೆಂದು ಹಾರಯಿಸುತ್ತೇನೆ.....

ಇಂತೀ ಬಿನ್ನಹಂಗಳು. ನಿಮ್ಮ

ಮುದವೀಡು ಕೃಷ್ಣರಾಯ.
